ಸದನವು ರಾಷ್ಟ್ರಗೀತೆಯೊಂದಿಗೆ (ವಂದೇ ಮಾತರಂ) ಪ್ರಾರಂಭವಾಯಿತು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮೊದಲಿಗೆ ಮಾನ್ಯ ಸಭಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಲಿಚ್ಛಿಸುತ್ತೇನೆ. ಏಕೆಂದರೆ, ಲೋಕಸಭೆ, ರಾಜ್ಯಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿರುವಂತೆ ರಾಷ್ಟ್ರಗೀತೆಯೊಂದಿಗೆ ಸದನವನ್ನು ಆರಂಭಿಸುವ ಮೂಲಕ ಒಂದು ಒಳ್ಳೆಯ ಸಂಪ್ರದಾಯವನ್ನು ಪ್ರಾರಂಬಿಸಿದ್ದೀರಿ ಅದೇ ರೀತಿ ಮುಕ್ತಾಯದಲ್ಲಿ ರಾಷ್ಟ್ರಗೀತೆಯೊಂದಿಗೆ ಸದನವನ್ನು ಮುಕ್ತಾಯ ಗೊಳಿಸಲಿದ್ದೀರಿ, ಅದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ವಂದೇ ಮಾತರಂ ರಾಷ್ಟ್ರಗೀತೆಯನ್ನು ಹಾಡಿರುವುದು ಸರಿಯಾದ ಕ್ರಮವಾಗಿದೆ ಅದಕ್ಕಾಗಿ ತಮಗೆ ಧನ್ಯವಾದಗಳು

1.ಅಭಿನಂದನಾ ಪ್ರಸ್ತಾಪ

ಸಭಾಧ್ಯಕ್ಷರು :–

1. ಡಾ: : ಸಿ.ಎನ್.ಆರ್.ರಾವ್

ಡಾ.ಚಿಂತಾಮಣಿ ನಾಗೇಶ್ ರಾಮಚಂದ್ರರಾವ್ ಇವರು 30ನೇ ಜೂನ್ 1934ರಂದು ಜನಿಸಿದ್ದು, ಈವರೆಗೂ ಸುಮಾರು 1500 ಸಂಶೋಧನಾ ಪ್ರಬಂಧ ಮಂಡಿಸಿರುವ ಮತ್ತು 60 ಡಾಕ್ಟರೇಟ್ ಗೌರವಕ್ಕೆ ಪಾತ್ರರಾಗಿರುವ ವಿಶ್ವಮಾನ್ಯ ಖ್ಯಾತ "ರಸಾಯನ ಶಾಸ್ತ್ರಜ್ಞ" ಹಾಗೂ ಕನ್ನಡಿಗ ಡಾ: ಸಿ.ಎನ್.ಆರ್.ರಾವ್ ಅವರಿಗೆ "ಭಾರತ ರತ್ನ" ಲಭಿಸಿರುವುದು ನಮಗೆಲ್ಲ ರಿಗೂ ಸಂತೋಷದ ಮತ್ತು ಸಂಭ್ರಮದ ವಿಷಯವಾಗಿರುತ್ತದೆ.

ಪ್ರೊ.ರಾವ್ ಅವರು ಸರ್.ಸಿ.ವಿ.ರಾಮನ್ ಮತ್ತು ಮಾಜಿ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ನಂತರ ಭಾರತ ರತ್ನಕ್ಕೆ ಭಾಜನರಾದ ಮೂರನೇ ವಿಜ್ಞಾನಿ. ಇದು ರಾಜ್ಯಕ್ಕೆ ಸಂದ ನಾಲ್ಕನೇ ಗೌರವ. ಪ್ರಸ್ತುತ ಪ್ರಧಾನಿ ಅವರ ವೈಜ್ಞಾನಿಕ ಸಲಹಾ ಮಂಡಳಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತಿದ್ದಾರೆ.

ಇವರನ್ನು ಈ ಸದನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

2. ಸಚಿನ್ ತೆಂಡೂಲ್ಕರ್

ಶ್ರೀ ಸಚಿನ್ ರಮೇಶ್ ತೆಂಡೂಲ್ಕರ್ ಇವರು 24ನೇ ಏಪ್ರಿಲ್ 1973ರಲ್ಲಿ ಮುಂಬೈಯಲ್ಲಿ ಜನಿಸಿದ್ದು, 1989ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಪ್ರವೇಶಿಸಿದರು ಈವರೆವಿಗೂ 200 ಟೆಸ್ಟ್ ಪಂದ್ಯ ಹಾಗೂ 463 ಏಕದಿನ ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿರುವುದಲ್ಲದೇ ಕ್ರಿಕೆಟ್ ಪಂದ್ಯಗಳಲ್ಲಿ ಶತಕ ರನ್‌ಗಳ ಶತಕವನ್ನು ಗಳಿಸಿರುವ ಅಗ್ರ ಶ್ರೇಯಾಂಕದ ಕ್ರಿಕೆಟ್ ಆಟಗಾರ ರಾಗಿರುತ್ತಾರೆ. ಶ್ರೀಯುತರಿಗೆ ಅತಿ ಕಿರಿಯ ವಯಸ್ಸಿನಲ್ಲಿ ಭಾರತ ರತ್ನ ಪ್ರಶ್ನಿಸಿ ಲಭಿಸಿರುವುದು ನಮ್ಮೆಲ್ಲರಿಗೂ ಸಂತೋಷದ ವಿಷಯವಾಗಿರುತ್ತದೆ.

ಇವರನ್ನು ಈ ಸದನವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಸರ್ಕಾರ ರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ರಸಾಯನ ಶಾಸ್ತ್ರಜ್ಞ ಡಾ॥ ಸಿ ಎನ್ ಆರ್ ರಾವ್ ಮತ್ತು ಖ್ಯಾತ ಕ್ರಿಕೆಟ್ ಪಟು ಶ್ರೀ ಸಚಿನ್ ತೆಂಡೂಲ್ಕರ್‌ರವರಿಗೆ ಪ್ರಕಟಣೆ ಮಾಡಿದೆ. ಇದು ನಮ್ಮೆಲ್ಲರಿಗೂ ಸಹ ಹೆಮ್ಮೆ ತರತಕ್ಕಂಥ ವಿಚಾರ. ಇದು ನಮಗಷ್ಟೇ ಅಲ್ಲ ಇಡೀ ಭಾರತದ 120 ಕೋಟಿ ಜನರಿಗೆ ಹೆಮ್ಮೆ ತರುವಂತಹ ವಿಚಾರ. ತಾವು ಈ ಸಂದರ್ಭದಲ್ಲಿ ಸದನದ ಮುಖಾಂತರ ಅವರಿಗೆ ಅಭಿನಂದನಾ ನಿರ್ಣಯ ಮಂಡಿಸಿರುವುದನ್ನು ನಾನು ಸಂಪೂರ್ಣವಾಗಿ ಸರ್ಕಾರದ ಪರವಾಗಿ ಮತ್ತು ಇಡೀ ಸದನದ ಪರವಾಗಿ ಬೆಂಬಲಿಸುತ್ತಿದ್ದೇನೆ ಎನ್ನುವ ಮಾತುಗಳನ್ನು ತಿಳಿಸಲಿಚ್ಛಿಸುತ್ತಿದ್ದೇನೆ.

ಈ ಇಬ್ಬರು ಮಹನೀಯರು ನಿಜವಾಗಿಯೂ ಕೂಡ ಭಾರತದ ರತ್ನಗಳು. ಇವರಿಬ್ಬರಿಗೂ ಸೂಕ್ತ ಸಮಯದಲ್ಲಿ ಭಾರತ ರತ್ನ ಪ್ರಧಾನ ಮಾಡಲು ಘೋಷಣೆ ಮಾಡಿರುವುದು ಬಹಳ ಸಂತೋಷದ ವಿಚಾರ ಎಂಬ ಮಾತುಗಳನ್ನು ತಿಳಿಸುತ್ತಾ ಪ್ರೊ ಸಿ.ಎನ್.ಆರ್.ರಾವ್ ಅವರು ಕನ್ನಡಿಗರು, ಕರ್ನಾಟಕದವರೇ, ಅವರ ವಿದ್ಯಾಭ್ಯಾಸವೆಲ್ಲಾ ಬೆಂಗಳೂರಿನಲ್ಲಿಯೇ ಆಗಿರು ವುದು. ಇನ್ನೊಂದು ಮುಖ್ಯವಾದ ವಿಚಾರವೆಂದರೆ, ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಓದಿರುವುದು. ಆದರೂ ಕೂಡ

ರಸಾಯನ ಶಾಸ್ತ್ರ ವಿಭಾಗದಲ್ಲಿ ಇವರು ಬಹಳ ದೊಡ್ಡ ಸಾಧನೆ ಮಾಡಿದ್ದಾರೆ 50 ವರ್ಷಗಳ ಹಿಂದೆ ಕಾನ್ಪುರ Indian Institute of Technology ಯಲ್ಲಿ ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಅವರು ತಮ್ಮ ವೃತ್ತಿ ಪ್ರಾರಂಭ ಮಾಡಿರುತ್ತಾರೆ. ಅಲ್ಲಿಂದ ಅವರು ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡಿ, ಬೆಂಗಳೂರಿನ ಪ್ರತಿಷ್ಠಿತ Indian Institute of Science ನಲ್ಲಿ ನಿರ್ದೇಶಕರಾಗಿ ಒಂದು ದಶಕಕ್ಕೂ ಹೆಚ್ಚು ಕಾಲ ಕಾರ್ಯ ನಿರ್ವಹಿಸಿ ಇಡೀ ಜಗತ್ತಿನ ಗಮನ ಸೆಳೆದಿದ್ದಾರೆ ಎಂಬುದು ಇಂದು ನಾವೆಲ್ಲರೂ ಗಮನಿಸಬೇಕಾದ ವಿಚಾರ ಅವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ಬಹಳ ಮುಖ್ಯವಾಗಿ ವಿಜ್ಞಾನ ಜಗತ್ತಿನ ಅತ್ಯುನ್ನತ ಪುರಸ್ಕಾರವಾದ Dan David ಪ್ರಶಸ್ತಿ. ಇದರ ಜೊತೆಗೆ 60 ಗೌರವ ಡಾಕ್ಟರೇಟ್‌ಗಳು ಸಿಕ್ಕಿವೆ. ಭಾರತ ದೇಶದಲ್ಲಿ, ಜಗತ್ತಿನ ಬೇರೆ ಬೇರೆ ದೇಶ ಗಳಿಂದ ಡಾಕ್ಟರೇಟ್ ಪ್ರಶಸ್ತಿಗಳು ಇವರಿಗೆ ಸಿಕ್ಕಿದೆ ಎಂಬುದು ನಾವೆಲ್ಲರೂ ಹೆಮ್ಮೆ ಪಡುವ ವಿಚಾರ. ಜೊತೆಗೆ ಸುಮಾರು ಒಂದೂವರೆ ಸಾವಿರ ಸಂಶೋ ಧನಾ ಪ್ರಕಟಣೆಗಳನ್ನು ಮಾಡಿದ್ದಾರೆ. ಪ್ರೊ.ರಾವ್ ಅವರು 45ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ, ಇಷ್ಟೆಲ್ಲಾ ಮಾಡಿ ನಮ್ಮ ನಾಡಿಗೆ ಕೀರ್ತಿ ಹಾಗೂ ಹಾಗೂ ಗೌರವವನ್ನು ತಂದು ಕೊಟ್ಟಿದ್ದಾರೆ. ಇಡೀ ಭಾರತಕ್ಕೆ ಗೌರವ ತಂದು ಕೊಟ್ಟಿದ್ದಾರೆ ಎಂಬುದು ಬಹಳ ಮುಖ್ಯವಾದ ವಿಚಾರ. ಈ ಸಂದರ್ಭದಲ್ಲಿ ನಾನು ಅವರಿಗೆ ನಮ್ಮೆಲ್ಲರ ಪರವಾಗಿ, ಸರ್ಕಾರದ ಪರವಾಗಿ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತಾ, ಯೋಗ್ಯ ಮತ್ತು ಅರ್ಹ ವ್ಯಕ್ತಿಯನ್ನು ಭಾರತ ಸರ್ಕಾರ ಗುರುತಿಸಿದೆ. ಭಾರತ ರತ್ನ ಪ್ರಶಸ್ತಿ ಕೊಡುತ್ತಿರುವುದು ಯೋಗ್ಯವಾಗಿದೆ ಎಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ಜೊತೆಗೆ ಸಚಿನ್ ತೆಂಡೂಲ್ಕರ್‌ರವರು ಕ್ರಿಕೆಟ್‌ನಿಂದ ನಿವೃತ್ತಿಯಾದ ದಿನವೇ ಭಾರತ ರತ್ನ ಪ್ರಶಸ್ತಿ ಘೋಷಣೆ ಮಾಡಿದ್ದಾರೆ. ಅವರು ಒಬ್ಬ ಜೀವಂತ ದಂತಕಥೆ ಎಂಬುದನ್ನು ಇವತ್ತು ನಾವು ನೋಡಲಿಕ್ಕೆ ಸಾಧ್ಯವಾಗುತ್ತದೆ. ಕ್ರಿಕೆಟ್‌ನಲ್ಲಿ ಬಹುಶಃ ಇಡೀ ಜಗತ್ತಿನಲ್ಲಿ ಅತ್ಯಂತ ಎತ್ತರಕ್ಕೆ ಬೆಳೆದ ಒಬ್ಬ ಕ್ರಿಕೆಟ್ ಪಟು. ನಾವು ಹಿಂದೆ ಬ್ರಾಡ್ ಮನ್ ಹೆಸರನ್ನು ಕೇಳಿದ್ದೇವೆ. ಇಂಗ್ಲೆಂಡ್ ದೇಶದಲ್ಲಿ ಕ್ರಿಕೆಟ್ ಕ್ರೀಡೆ ಹುಟ್ಟಿದ್ದು. ಅಲ್ಲಿಂದ ಕ್ರಿಕೆಟ್ ಎಂಬ ಕ್ರೀಡೆ ಬ್ರಿಟಿಷರ

ಜೊತೆ ನಮ್ಮ ದೇಶಕ್ಕೆ ಬಂದಿದೆ. ಆದರೂ ಕೂಡ ಕ್ರಿಕೆಟನ್ನು ಮೈಗೂಡಿಸಿಕೊಂಡು ಇಷ್ಟು ಎತ್ತರಕ್ಕೆ ಬೆಳೆದಿರುವುದು ನಾವೆಲ್ಲರೂ ಸಂತೋಷ ಪಡುವ ವಿಚಾರ ಅರ್ಹ ವ್ಯಕ್ತಿಯನ್ನು ಭಾರತ ಸರ್ಕಾರ ಗುರುತಿಸಿದೆ ಎಂಬುದು ನಾವು ಹೆಮ್ಮೆ ಪಡುವ, ಹರ್ಷ ಪಡುವ ವಿಚಾರ ಎಂದು ಭಾವಿಸಿದ್ದೇನೆ. ಕ್ರಿಕೆಟ್ ಇತಿಹಾಸದಲ್ಲಿ ಸಚಿನ್ ತೆಂಡೂಲ್ಕರ್ ರವರಷ್ಟು ದೀರ್ಘಕಾಲ ಕ್ರಿಕೆಟ್ ಆಡಿದವರು ಬೇರಾರೂ ಇಲ್ಲ 24 ವರ್ಷಗಳ ಕಾಲ ಕ್ರಿಕೆಟ್ ಆಡಿದ್ದಾರೆ ಅವರಿಗೆ ಕ್ರಿಕೆಟ್ ಕ್ರೀಡೆಯೇ ಬದುಕು. ಅವರು ನಿವೃತ್ತಿ ಯಾದ ದಿನ ಹೇಳಿದರು–"ನಾನು ಕ್ರಿಕೆಟ್ ಬಿಟ್ಟು ಬದುಕುವುದು ಹೇಗೆ?" ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಹಾಗಾಗಿ ಕ್ರಿಕೆಟ್ ಎಂದರೆ ಸಚಿನ್ ತೆಂಡೂಲ್ಕರ್, ಸಚಿನ್ ತೆಂಡೂಲ್ಕರ್ ಎಂದರೆ ಕ್ರಿಕೆಟ್ ಎಂಬ ರೀತಿಯಲ್ಲಿ ಅವರು ಎಲ್ಲರ ಮನೆ ಮಾತಾಗಿದ್ದರೆಂದು ಹೇಳಬೇಕಾಗುತ್ತದೆ. ಅವರ ಈ 24 ವರ್ಷಗಳ ಅವಧಿಯಲ್ಲಿ ಅನೇಕ ದಾಖಲೆಗಳನ್ನು ನಿರ್ಮಾಣ ಮಾಡಿದ್ದಾರೆ. ಅವರು ಮಾಡಿರುವ ಕೆಲವು ದಾಖಲೆಗಳನ್ನು ಯಾರೂ ಕೂಡ ಮುರಿಯಲು ಸಾಧ್ಯವಿಲ್ಲ ಎಂಬುದನ್ನು ನೋಡಿದ್ದೇವೆ. ಟೆಸ್ಟ್ ಪಂದ್ಯದಲ್ಲಿ 51 ಶತಕಗಳನ್ನು, ಒಂದು ದಿನದ ಆಟದಲ್ಲಿ 49 ಶತಕಗಳನ್ನು ಮಾಡಿರುವುದು ಬೇರೆ ಯಾವ ಕ್ರಿಕೆಟ್ ಪಟುವಿಗೂ ಇಷ್ಟು ವರ್ಷಗಳ ಅವಧಿಯಲ್ಲಿ ಮಾಡಲು ಸಾಧ್ಯವಾಗಿಲ್ಲ. ಈ ದಾಖಲೆಯನ್ನು ಮುರಿಯಲು ಎಷ್ಟು ವರ್ಷವಾಗುತ್ತದೆಯೋ ಗೊತ್ತಿಲ್ಲ. ಆದರೆ ಇವತ್ತು ಭಾರತದ ಕ್ರಿಕೆಟ್ ಸಚಿನ್ ತೆಂಡೂಲ್ಕರ್ ಇಲ್ಲದೇ ಹೋದರೆ ಒಂದು ರೀತಿಯಲ್ಲಿ ಆ ಜಾಗ ಶೂನ್ಯವಾಯಿತು ಎಂಬ ರೀತಿಯಲ್ಲಿ ಅನಿಸಲು ಸಾಧ್ಯವಾಗುತ್ತದೆ. ಆದುದರಿಂದ ಒಬ್ಬ ಖ್ಯಾತ ಕ್ರಿಕೆಟ್ ಪಟು ನಾವೆಲ್ಲರೂ ಹೆಮ್ಮೆ ಪಡುವ ಕ್ರಿಕೆಟ್ ಪಟು ನಾನು ಕ್ರಿಕೆಟ್ ಆಟ ಆಡುವವನಲ್ಲ. ಆದರೆ ನೋಡುತ್ತಿದ್ದೆ ನಾವು ಶಾಲೆಯ ದಿನಗಳಲ್ಲಿಯೂ ಆಡುತ್ತಾ ಇರಲಿಲ್ಲ ಆದರೆ ನೋಡುವ ಹವ್ಯಾಸ ಇತ್ತು. ಹಾಗಾಗಿ ಸಚಿನ್‌ರವರ ಆಟ ಎಂದರೆ ನಮಗೂ ನೋಡಬೇಕನಿಸುತ್ತಿತ್ತು. ತಮ್ಮ 16ನೇ ವಯಸ್ಸಿಗೆ ಕ್ರಿಕೆಟ್‌ಗೆ ಬಂದು ಇಷ್ಟೊಂದು ದಶಕಗಳ ಕಾಲ ಆಟವಾಡಿದ್ದಾರೆ. ದೇಶಕ್ಕೆ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ. ಕ್ರಿಕೆಟ್‌ನಲ್ಲಿ ಇಡೀ ಜಗತ್ತಿನಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

ಸಚಿನ್ ತಂಡೂಲ್ಕರ್‌ರವರಿಗೆ ಇನ್ನೊಬ್ಬ ಸರಿಸಮಾನ ಕ್ರಿಕೆಟ್ ಪಟು ಇನ್ನೊಬ್ಬರಿಲ್ಲ ಎಂಬುದನ್ನು ನೋಡುತ್ತಿದ್ದೇವೆ. ಆದುದರಿಂದ ಸಚಿನ್ ತೆಂಡೂಲ್ಕರ್‌ರವರಿಗೆ ಸಚಿನ್‌ರವರೇ ಸಾಟಿ ಎಂಬುದನ್ನು ಇಂದು ನಾವು ನೆನಪು ಮಾಡಿಕೊಳ್ಳುತ್ತಾ ಅವರಿಗೆ ನಾನು ಎಲ್ಲಾ ಸದಸ್ಯರ ಪರವಾಗಿ, ಸರ್ಕಾರದ ಪರವಾಗಿ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಈ ಮೂಲಕ ಭಾರತ ಸರ್ಕಾರ ಇವರಿಬ್ಬರಿಗೂ ಕೂಡ ಭಾರತ ರತ್ನ ಪ್ರಶಸ್ತಿ ಪ್ರಕಟ ಮಾಡಿ ಇಡೀ ದೇಶವೇ ತನ್ನನ್ನು ತಾನು ಗೌರವಿಸಿಕೊಂಡ ರೀತಿಯಲ್ಲಿ ಆಗಿದೆ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಿ ಇಬ್ಬರಿಗೂ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ದೇವರು ಇವರಿಬ್ಬರಿಗೂ ಆನಂದ ಮತ್ತು ಆಯುಷ್ಯವನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ, ನಿಮ್ಮ ಅಭಿನಂದನಾ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್ ಡಿ ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಸಭಾಧ್ಯಕ್ಷರೆ, ಇತ್ತೀಚೆಗೆ ಕೇಂದ್ರ ಸರ್ಕಾರ ಎರಡು ಪ್ರಮುಖ ಕ್ಷೇತ್ರಗಳಲ್ಲಿ ಅತ್ಯಂತ ಮಹತ್ತರ ಸಾಧನೆ ಮಾಡಿರುವ ಇಬ್ಬರು ಮಹಾನ್ ವ್ಯಕ್ತಿಗಳಿಗೆ ಭಾರತದ ಪರಮೋಚ್ಚ ಪ್ರಶಸ್ತಿಯನ್ನು ಗೌರವಪೂರ್ವಕವಾಗಿ ನೀಡಿದ್ದು, ಆ ಇಬ್ಬರು ಮಹಾನ್ ವ್ಯಕ್ತಿಗಳಿಗೆ ಇಂದು ಸದನದ ಒಂದು ಅಭಿನಂದನೆಯನ್ನು ಸಲ್ಲಿಸುವ ಒಂದು ನಿರ್ಣಯದಲ್ಲಿ ಪ್ರಥಮವಾಗಿ ವಿಜ್ಞಾನ ಕ್ಷೇತ್ರದಲ್ಲಿ ಅತ್ಯಂತ ಹಿಂದಿರುವ ರಾಜ್ಯದ ಒಂದು ಜಿಲ್ಲೆ.

ಅಂತಹ ಜಿಲ್ಲೆಯಲ್ಲಿ ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿ ಮಹತ್ವದ ಸಾಧನೆಯನ್ನು ನಾಡಿಗೆ ನೀಡಿರತಕ್ಕ ಡಾ: ಚಿಂತಾಮಣಿ ನಾಗೇಶ್ ರಾಮಚಂದ್ರರಾವ್‌ರವರಿಗೆ ಹಾಗೂ ಕ್ರಿಕೆಟ್ ರಂಗದಲ್ಲಿ ವಿಶ್ವದಲ್ಲೇ ಅತ್ಯಂತ ದೊಡ್ಡ ದಾಖಲೆಯನ್ನು ಮಾಡಿರತಕ್ಕ ಸಚಿನ್ ರಮೇಶ್ ತೆಂಡೂಲ್ಕರ್ ರವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿರತಕ್ಕಂಥ ಈ ಒಂದು ಸಂದರ್ಭದಲ್ಲಿ ಅವರಿಗೆ ನಾವೆಲ್ಲರೂ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ತಾವೇನು ಸದನದಲ್ಲಿ ತೀರ್ಮಾನವನ್ನು ಮಾಡಿದ್ದೀರಿ, ಅದು ಸ್ತುತ್ಯಾರ್ಹವಾದುದು ಡಾ : ಸಿ ಎನ್.ಆರ್.ರಾವ್‌ರವರು ಇವತ್ತು ಭಾರತ ರತ್ನ ಪ್ರಶಸ್ತಿಗೆ ಭಾಜನರಾಗಿ

ಕನ್ನಡ ನಾಡಿಗೆ ಕೀರ್ತಿಯನ್ನು ತಂದಿರತಕ್ಕ ಮೂರನೇ ವ್ಯಕ್ತಿಯಾಗಿದ್ದಾರೆ. ಹಿಂದೆ ಡಾ: ವಿಶ್ವೇಶ್ವರಯ್ಯನವರು ಮತ್ತು ಡಾ. ಸಿ.ವಿ.ರಾಮನ್‌ರವರು ಭಾರತ ರತ್ನ ಪ್ರಶಸ್ತಿಗೆ ಭಾಜನರಾಗಿ ಇಡೀ ದೇಶದಲ್ಲಿ, ವಿಶ್ವದಲ್ಲಿ ರಾಜ್ಯದ ಗೌರವವನ್ನು, ಖ್ಯಾತಿಯನ್ನು ತರುವುದರಲ್ಲಿ ಯಶಸ್ವಿಯಾಗಿದ್ದರು. ಅವರವರ ಕ್ಷೇತ್ರದಲ್ಲಿ ಅತ್ಯುತ್ತಮ ದುಡಿಮೆಯನ್ನು ಮಾಡಿ ಅವರು ಭಾರತ ರತ್ನ ಪ್ರಶಸ್ತಿಗಳನ್ನು ಪಡೆದಿ ದ್ದರು. ಅದೇ ರೀತಿಯಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಡಾ ಸಿ ಎನ್.ಆರ್.ರಾವ್‌ರವರು ಹಲವಾರು ರೀತಿಯ ಸಾಧನೆಯನ್ನು ಮಾಡಿದ್ದಾರೆ, ದಾಖಲೆಯನ್ನು ನಿರ್ಮಾಣ ಮಾಡಿದ್ದಾರೆ. ತನ್ಮೂಲಕ ವಿಶೇಷವಾಗಿ ಕನ್ನಡ ನಾಡಿಗೆ ಹೆಚ್ಚಿನ ಗೌರವವನ್ನು ತಂದುಕೊಟ್ಟಿರುತ್ತಾರೆ ನಿಜಕ್ಕೂ ಈ ಒಂದು ಗೌರವಕ್ಕೆ ಇವರು ಅಭಿನಂದನಾರ್ಹರು ಎಂದು ಹೇಳಲಿಕ್ಕೆ ಬಯಸುತ್ತೇನೆ. ವಿಶೇಷವಾಗಿ ಈ 80–82ನೇ ಇಳಿ ವಯಸ್ಸಿನಲ್ಲೂ ಅವರಲ್ಲಿ ಇರತಕ್ಕಂಥ ಉತ್ಸಾಹವನ್ನು ನಾವು ಕಂಡಾಗ ಬಹುಶಃ ನಾವೆಲ್ಲರೂ ತಲೆ ತಗ್ಗಿಸುವಂತಾಗುತ್ತದೆ. ಅವರಲ್ಲಿ ಅಪರಿಮಿತ ಉತ್ಸಾಹ ಇರುವುದನ್ನು ಅವರನ್ನು ನಾವು ಕಂಡಾಗ ಕಾಣಬಹುದಾಗಿದೆ. ಅವರು ಹಲವಾರು ರೀತಿಯ ಸಂಶೋಧನೆಗಳನ್ನು ನಡೆಸಿ, ಸುಮಾರು 45 ಕೃತಿಗಳನ್ನು ವಿಜ್ಞಾನ ಕ್ಷೇತ್ರದಲ್ಲಿ ಪ್ರಕಟಿಸಿದ್ದಾರೆ ಅವರನ್ನು ಭೇಟಿ ಮಾಡಿದಂತಹ ಸನ್ನಿವೇಶದಲ್ಲಿ ಈಗಲೂ ಹಲವಾರು ಕೃತಿಗಳನ್ನು ನಾಡಿನ ವಿದ್ಯಾವಂತರಿಗೆ ವಿಜ್ಞಾನ ಕ್ಷೇತ್ರಕ್ಕೆ ನೀಡಬೇಕೆನ್ನುವ ಹಂಬಲ ಅಥವಾ ಉತ್ಸಾಹವನ್ನು ಇರುವುದನ್ನು ಅವರಲ್ಲಿ ನಾವು ಕಾಣುತ್ತೇವೆ. ಇವತ್ತು ಯಾವ ಭಾರತ ರತ್ನ ಪ್ರಶಸ್ತಿಗೆ ಅವರು ಭಾಜನರಾಗಿದ್ದಾರೋ, ಅದು ಕನ್ನಡ ನಾಡಿಗೆ ಅವರು ತಂದಿರತಕ್ಕಂಥ ಹೆಮ್ಮೆಯೆಂದರೆ ತಪ್ಪಾಗಲಾದರು. ಅವರು ವಿಜ್ಞಾನ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ್ದರೂ, ವಿಶೇಷವಾಗಿ ಕನ್ನಡದ ಬಗ್ಗೆ ಅವರು ಇಟ್ಟಿರತಕ್ಕಂಥ ಅಭಿಮಾನವನ್ನು ಇವತ್ತೂ ನಾವು ಕಂಡಾಗ ನಿಜಕ್ಕೂ ಸಂತೋಷವಾಗುತ್ತದೆ. ಕನ್ನಡ ಭಾಷೆಯ ಬಗ್ಗೆ ಅವರಲ್ಲಿ ಇರತಕ್ಕಂಥ commitment ಏನಿದೆ, ಅಂತಹ ಒಂದು ಸನ್ನಿವೇಶವನ್ನು ನಾವು ಪ್ರತಿಯೊಬ್ಬರಲ್ಲೂ ಕಾಣಬೇಕು ಎನ್ನುವುದನ್ನು ಅವರು ಹಲವಾರು

ಸಂದರ್ಭಗಳಲ್ಲಿ ಸಾಬೀತು ಮಾಡಿದ್ದಾರೆ. ಅವರು ಮತ್ತು ಅವರ ಧರ್ಮಪತ್ನಿ ಯವರು ಉತ್ತರ ಕರ್ನಾಟಕದ ಹಲವಾರು ಹಳ್ಳಿಗಳಿಗೆ ಭೇಟಿ ಕೊಟ್ಟು, ಉತ್ತರ ಕರ್ನಾಟಕ ಭಾಗದ ನಮ್ಮ ಯುವ ಮಕ್ಕಳಿಗೆ ಕನ್ನಡದಲ್ಲೇ ಯಾವ ವಿದ್ಯೆಯನ್ನಾದರೂ ಕಲಿಯಬಹುದು ಎನ್ನುವ ಬಗ್ಗೆ ಕೆಲವು ಭಾಷಣಗಳನ್ನೇನು ಮಾಡಿದ್ದಾರೆ. ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಷಯಗಳನ್ನು ಸಾಮಾನ್ಯ ಮಕ್ಕಳ ಜೊತೆಯಲ್ಲಿ ಹಂಚಿಕೊಳ್ಳತಕ್ಕಂಥ ಸಂದರ್ಭದಲ್ಲಿ ಕನ್ನಡಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿರತಕ್ಕಂಥ ಹಲವಾರು ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿದ್ದಾರೆ. ನಮ್ಮೆಲ್ಲರಿಗೂ ಆ ಒಂದು ರೀತಿಯ ಅವರ ಭಾವನೆಗಳಿಂದ ಸ್ಫೂರ್ತಿ ಯನ್ನು ನೀಡಿದ್ದಾರೆಂದು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಕನ್ನಡದ ಮೂರನೆಯ ವ್ಯಕ್ತಿಯಾಗಿ ಭಾರತ ರತ್ನ ಅವರು ಭಾಜನರಾಗಿದ್ದಾರೆ, ಇದು ಕನ್ನಡ ನಾಡಿಗಷ್ಟೇ ಅಲ್ಲ, ದೇಶಕ್ಕೆ ಕೀರ್ತಿಯನ್ನು ತಂದು ಕೊಡುವ ವಿಷಯ ವಾಗಿದೆ. ಅವರನ್ನು ನಾವು ಭೇಟಿಯಾದಂತಹ ಹಲವಾರು ಸಂದರ್ಭಗಳಲ್ಲಿ ಅವರು, ಮಾಹಿತಿ ತಂತ್ರಜ್ಞಾನದ ಕಡೆಗೆ ನಮ್ಮ ಯುವಕರು ಇವತ್ತು ಹೆಚ್ಚಿನ ಆಕರ್ಷಣೆಗೆ ಒಳಗಾಗುತ್ತಿದ್ದಾರೆ. ಅದಕ್ಕಿಂತ ಹೆಚ್ಚಾಗಿ ವಿಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವುದಕ್ಕೆ ಯುವಕರು ಪ್ರೇರೇಪಿತರಾಗಬೇಕು ಎಂದು ಹೇಳುವುದನ್ನು ನಾವು ಕಂಡಿದ್ದೇವೆ. ಇವತ್ತು ವಿಜ್ಞಾನ ಕ್ಷೇತ್ರದಲ್ಲಿ ಹಲವಾರು ರೀತಿಯ ಆವಿಷ್ಕಾರಗಳಾಗುತ್ತಿವೆ. ವಿಜ್ಞಾನವು ಹಲವಾರು ಸಮಸ್ಯೆಗಳಿಗೆ ಉತ್ತರ ಒದಗಿಸುತ್ತಿದೆ. ಇವತ್ತು ಜನ ಸಾಮಾನ್ಯರು ತೊಂದರೆಯಲ್ಲಿದ್ದೇವೆ, ವಿಶೇಷವಾಗಿ ಕೃಷಿಕರ ಸಮಸ್ಯೆಗಳಿಗೆ ಇವತ್ತು ವಿಜ್ಞಾನ ಕ್ಷೇತ್ರದಿಂದ ಹೆಚ್ಚಿನ ಸಹಕಾರ ದೊರಬೇಕಾಗಿದೆ. ಆ ನಿಟ್ಟಿನಲ್ಲಿ ವಿಜ್ಞಾನ ಕ್ಷೇತ್ರದಿಂದ ಹೆಚ್ಚಿನ ಪ್ರೋತ್ಸಾಹವನ್ನು ಕೊಡಿಸುವದಕ್ಕೆ ಡಾ: ಸಿ.ಎನ್.ಆರ್.ರಾವ್‌ರವರು ಯಾವ ಒಂದು ಪ್ರಯತ್ನವನ್ನು ಪಡುತ್ತಾರೆ ಎಂದು ನೋಡಬೇಕಾಗಿದೆ. ಸಾರ್ವಜನಿಕವಾಗಿ ಹಲವಾರು ಸಂದರ್ಭದಲ್ಲಿ, ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.ಮೊನ್ನೆ ಅವರಿಗೆ ಪ್ರಶಸ್ತಿ ಬಂದಂತಹ ಸಂದರ್ಭದಲ್ಲಿ, ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದನ್ನೇ ಇಲ್ಲಿ ಕೆಲವರು ಬೇರೆ ರೀತಿಯಲ್ಲಿ ಅರ್ಥೈಸಲಿಕ್ಕೆ ಹೋದರು. ಅವರು ಪದವೊಂದನ್ನು ಬಳಸಿದಂತಹ

ವಿಷಯದಲ್ಲಿ ಚರ್ಚೆಗಳು ಪ್ರಾರಂಭವಾಯಿತು. ಅವರು ಹೇಳಿದಂತಹ 'ıdıotıc' ಎನ್ನುವಂತಹ ಪದವನ್ನು 'ıdıot' ಎಂದು ಹೇಳಿದ್ದಾರೆಂದು ಪರಿವರ್ತನೆ ಮಾಡಿ, ಅದು ಒಂದು ರೀತಿಯ ಚರ್ಚೆಗೆ ಗ್ರಾಸವಾಗತಕ್ಕಂಥ ನಿಟ್ಟಿನಲ್ಲಿ ಕೆಲವರು ಪ್ರಯತ್ನವನ್ನು ಪಟ್ಟರು. ಅವರನ್ನು ಭೇಟಿ ಮಾಡಿದಾಗ ಹೇಳುತ್ತಿದ್ದರು.ಹಲವಾರು ರೀತಿಯ ನಿರ್ಧಾರ ಗಳನ್ನು ಮಾಡಬೇಕಾದರೆ, ıdıotıc ತೀರ್ಮಾನಗಳನ್ನು ಮಾಡತಕ್ಕಂಥದ್ದು ಏನಿದೆ, ಅಂತಹ ವಿಷಯವೊಂದನ್ನು ಪ್ರಸ್ತಾಪ ಮಾಡಿದ್ದನ್ನು ಬೇರೆ ರೀತಿಯಲ್ಲಿ ಕೆಲವರು ವಿಶ್ಲೇಷಣೆ ಮಾಡಲಿಕ್ಕೆ ಹೋಗಿರತಕ್ಕ ಬಗ್ಗೆ ಅವರು ಬಹಳ ನೊಂದು ಮಾತನಾಡುತ್ತಿದ್ದರು. ಇವತ್ತು ಅಂತಹ ಒಬ್ಬ ವ್ಯಕ್ತಿ ತಮ್ಮ ಇಳಿ ವಯಸ್ಸಿನಲ್ಲೂ ವಿಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿಯನ್ನೇನು ಹೊಂದಿರುವುದು ಅದು ಅಭಿನಂದ ನಾರ್ಹವಾಗಿದೆ. ಹಿಂದೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಎರಡೂ ಸೇರಿ ಅವಿಭಜಿತ ಜಿಲ್ಲೆಯಾಗಿತ್ತು ಇವತ್ತು ಚಿಕ್ಕಬಳ್ಳಾಪುರ ಹೊಸ ಜಿಲ್ಲೆಯಾಗಿ ಪರಿವರ್ತನೆಯಾಗಿದೆ ಚಿಕ್ಕಬಳ್ಳಾಪುರ ಜಿಲ್ಲೆಗೆ ಎರಡು ಭಾರತ ರತ್ನ ಪ್ರಶಸ್ತಿಗಳು ದೊರಕಿದಂತಾಗಿದೆ. ಅದಕ್ಕಾಗಿ ನಾನು ಬಹುಶಃ ವಿಶೇಷವಾಗಿ ಅಭಿನಂದನೆ ಗಳನ್ನು ಸಲ್ಲಿಸಬೇಕಾಗುತ್ತದೆ. ಡಾ: ರಾವ್‌ರವರು ಚಿಂತಾಮಣಿಯ ಹಳ್ಳಿಯಲ್ಲಿ ಜನಿಸಿದ್ದರು. ಅವರು ಚಿಂತಾಮಣಿಯ ಮಗನಾಗಿದ್ದರು ನಾನು ಆ ಒಂದು ಭಾಗದ ಅಳಿಯನಾಗಿ ಅವರಿಗೆ ಅಭಿನಂದನೆಯನ್ನು ಈ ಸದನದ ಮೂಲಕ ಸಲ್ಲಿಸತಕ್ಕಂಥ ಅವಕಾಶ ನನಗೆ ದೊರಕಿರತಕ್ಕಂಥದ್ದು ಯಾವುದೋ ಜನ್ಮದ ಪುಣ್ಯವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಇವತ್ತು ಅವರಿಗೆ ಅತ್ಯಂತ ಹೃದಯಪೂರ್ವಕವಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಲಿಕ್ಕೆ ಬಯಸು ತ್ತಿದ್ದೇನೆ. ಅದೇ ರೀತಿಯಲ್ಲಿ ನಮ್ಮ ಸಚಿನ್ ತೆಂಡೂಲ್ಕರ್‌ರವರು ಅತ್ಯಂತ ಕಿರಿಯ ವಯಸ್ಸಿನಲ್ಲೇ ಭಾರತ ಕ್ರಿಕೆಟ್ ತಂಡದ ಆಟಗಾರನಾಗಿ ಆಯ್ಕೆಯಾಗಿ ಅವರು ಸಲ್ಲಿಸಿರತಕ್ಕಂಥ ಸೇವೆ ಅಪಾರವಾದುದು. ಭಾರತದ ಕ್ರಿಕೆಟ್ ತಂಡದ ಪರವಾಗಿ ಆಟವಾಡಿ ಹಲವಾರು ದೇಶಿಯ ಮತ್ತು ವಿಶ್ವ ದಾಖಲೆಗಳನ್ನು ಅವರು ನಿರ್ಮಾಣ ಮಾಡಿದ್ದಾರೆ ಬಹುಶಃ ಆ ದಾಖಲೆಗಳನ್ನು ಮತ್ತೊಬ್ಬ ಆಟಗಾರರರು ಇವತ್ತು ಮುರಿಯುವುದು ಕಷ್ಟ ಎನ್ನುವುದು ನನ್ನ ಅಭಿಪ್ರಾಯ

ವಾಗಿದೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ಚಿಕ್ಕ ವಯಸ್ಸಿನಲ್ಲೇ ಅವರು ಕ್ರಿಕೆಟ್ ರಂಗಕ್ಕೆ ಪಾದರ್ಪಣೆ ಮಾಡಿ ಹಲವಾರು ರೀತಿಯ ದಾಖಲೆ ಗಳನ್ನು ನಿರ್ಮಾಣ ಮಾಡಿದ್ದಾರೆ. ಇವತ್ತಿನ ಯುವ ಜನಾಂಗಕ್ಕೆ ಕ್ರೀಡೆಯಲ್ಲಿ ಆಸಕ್ತಿ ಉಂಟಾಗುವಂತೆ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ ಅದ ರಲ್ಲೂ ವಿಶೇಷವಾಗಿ ಕ್ರಿಕೆಟ್ ಕ್ರೀಡೆಯಲ್ಲಿ ಆಸಕ್ತಿಯನ್ನು ತುಂಬಿದ ವ್ಯಕ್ತಿಯಾಗಿ ಶಾಶ್ವತವಾಗಿ ಕ್ರಿಕೆಟ್ ರಂಗದಲ್ಲಿ ಇರುತ್ತಾರೆಂದು ನಾನು ಹೇಳಲಿಕ್ಕೆ ಬಯಸು ತ್ತೇನೆ. ಇವತ್ತು ಏಕ ದಿನ ಪಂದ್ಯ ಇರಬಹುದು, ಟೆಸ್ಟ್ ಪಂದ್ಯ ಇರಬಹುದು, ಹಲವಾರು ಸಾಧನೆಗಳನ್ನು ನಿರ್ಮಾಣ ಮಾಡಿ, ಹಲವಾರು ಶತಕಗಳನ್ನು ಅವರ ದಾಖಲೆಗೆ ಸೇರಿಸಿಕೊಂಡಿದ್ದಾರೆ. ಬಹುಶಃ ಆ ದಾಖಲೆಗಳನ್ನು ಮುಂದಿನ ದಿನಗಳಲ್ಲಿ ಯಾರೂ ಮುರಿಯಲಿಕ್ಕೆ ಸಾಧ್ಯವಿಲ್ಲ. ಇವತ್ತು ಅಂತಹ ಒಬ್ಬ ಪ್ರತಿಭಾವಂತ ಕ್ರೀಡಾಪಟುವಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡು ವಂತಹ ಉತ್ತಮವಾದ ತೀರ್ಮಾನವನ್ನು ಮಾಡಿದ್ದಕ್ಕಾಗಿ ಕೇಂದ್ರ ಸರ್ಕಾರಕ್ಕೂ ಕೂಡ ನಾನು ಈ ಸಂದರ್ಭದಲ್ಲಿ ಹೃದಯಪೂರ್ವಕವಾದಂತಹ ಅಭಿನಂದನೆ ಗಳನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಧಾರವಾಡ ಕೇಂದ್ರ) :– ಸನ್ಮಾನ್ಯ ಅಧ್ಯಕ್ಷರೆ, ಇಬ್ಬರು ಪ್ರಮುಖರಿಗೆ ಭಾರತ ರತ್ನ ಪ್ರಶಸ್ತಿ ಸಿಕ್ಕಿರುವ ಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲು ತಾವು ತಂದಿರುವ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಡಾ : ಸಿ.ಎನ್.ಆರ್.ರಾವ್‌ರವರ ಬಗ್ಗೆ ತಮ್ಮ ನಿರ್ಣಯದಲ್ಲಿ ಪ್ರಸ್ತಾವನೆಯಾಗಿದೆ. ಡಾ: ಸಿ.ಎನ್.ಆರ್.ರಾವ್‌ರವರಿಗೆ ಇವತ್ತು ಭಾರತ ರತ್ನ ಪ್ರಶಸ್ತಿ ಸಿಕ್ಕಿರುವುದು ಹೆಮ್ಮೆಯ ವಿಷಯವಾಗಿದೆ. ನಮ್ಮೆಲ್ಲಾ ಕನ್ನಡಿಗರಿಗೆ ತನ್ಮೂಲಕ ಒಂದು ಹೆಮ್ಮೆಯ ಸ್ಥಾನ ಸಿಕ್ಕಿದೆ ಎಂದು ನಾನು ಭಾವಿಸಿದ್ದೇನೆ. ಡಾ: ಸಿ.ಎನ್.ಆರ್.ರಾವ್‌ರವರು ನಮ್ಮ ಕರ್ನಾಟಕದ ಹೆಮ್ಮೆಯ ಪುತ್ರರಾಗಿದ್ದಾರೆ. ಅವರು ವಿಜ್ಞಾನ ರಂಗದಲ್ಲಿ ಮಾಡಿದಂತಹ ಸಂಶೋಧನೆಗಳ ಸಾಧನೆಗೆ ಭಾರತ ಸರ್ಕಾರ ಇಂತಹ ದೊಡ್ಡದಾದಂತಹ ಪುರಸ್ಕಾರವನ್ನು ಕೊಟ್ಟಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. ಪ್ರಧಾನ ಮಂತ್ರಿಗಳ ವೈಜ್ಞಾನಿಕ ಮಂಡಳಿ ಮುಖ್ಯಸ್ಥರಾಗಿ ಡಾ: ಸಿ.ಎನ್.ರಾವ್‌ರವರು

ಇವತ್ತು ಕೆಲಸವನ್ನು ಮಾಡುತ್ತಿದ್ದಾರೆ. ವಿಜ್ಞಾನ ರಂಗಕ್ಕೆ ಬಹಳ ಅತ್ಯಂತ ಹೆಚ್ಚಿನ ಒಂದು ಸೇವೆಯನ್ನು ಕೊಟ್ಟಂತಹ ವ್ಯಕ್ತಿ ಸಿ.ಎನ್.ಆರ್.ರಾವ್‌ರವರು. ಈ ರೀತಿಯಾಗಿ ಅವರಿಗೊಂದು ಅಭಿನಂದನೆಯನ್ನು ಸಲ್ಲಿಸುವುದು ಸ್ತುತ್ಯಾರ್ಹ ವಾದುದು. ಭಾರತ ರತ್ನ ಪ್ರಶಸ್ತಿ ಸಿಕ್ಕ ನಂತರ ಅವರು ಹೋದಂತಹ ಕಡೆ ಗಳಲ್ಲಿ ಮತ್ತು ಮಾಧ್ಯಮದ ಜೊತೆಗೆ ಮಾತನಾಡುವಂತಹ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಅವರು ವ್ಯಕ್ತಪಡಿಸಿದ್ದಾರೆ. ಅದನ್ನೂ ಸಹಿತ ನಾವು ಗಂಭೀರವಾಗಿ ತೆಗೆದುಕೊಳ್ಳಬೇಕು ಎನ್ನುವಂಥದ್ದು ನನ್ನ ಅಭಿಪ್ರಾಯ ವಾಗಿದೆ. ಇವತ್ತು ವಿಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಗುತ್ತಿಲ್ಲ. ಕ್ರಿಕೆಟ್ ಕ್ಷೇತ್ರ ಇರಬಹುದು, ರಾಜಕೀಯ ಕ್ಷೇತ್ರ ಇರಬಹುದು ಹಾಗೂ ಇನ್ನಿತರ ಕೆಲವು ಪ್ರಮುಖ ಕ್ಷೇತ್ರಗಳಿಗೆ ಎಷ್ಟು ಪ್ರಾಮುಖ್ಯತೆ ಸಿಗುತ್ತಿದೆಯೋ, ಅಷ್ಟು ಪ್ರಾಮು ಖ್ಯತೆ ಈ ವಿಜ್ಞಾನ ರಂಗಕ್ಕೆ ಸಿಗುತ್ತಿಲ್ಲ ಎನ್ನುವ ಕೊರಗನ್ನು ಡಾ. ಸಿ.ಎನ್.ರಾವ್‌ರವರು ವ್ಯಕ್ತಪಡಿಸಿದ್ದಾರೆ. ಅದರಲ್ಲಿ ನಿಜಾಂಶವಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತಿದ್ದೇನೆ. 2010ರಲ್ಲಿ ರಾಷ್ಟ್ರೀಯ ವೈಜ್ಞಾನಿಕ ಸಲಹಾ ಮಂಡಳಿಯ ಅಧ್ಯಕ್ಷರಾಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಅವರೊಂದು ವರದಿಯನ್ನು ಕೊಟ್ಟಿದ್ದಾರೆ ವಿಜ್ಞಾನ ರಂಗದ ಬೇಡಿಕೆಗಳೇನಿವೆ, ಅದಕ್ಕೆ ಸರ್ಕಾರ ಏನೇನು ಮಾಡಬೇಕಾಗಿದೆ, ಯಾವ ರೀತಿಯಲ್ಲಿ ಹೆಚ್ಚಿನ ಅನುದಾನ ಕೊಡಬೇಕಾಗಿದೆ ಎಂಬ ಬಗ್ಗೆ ಪಟ್ಟಿಯೊಂದನ್ನು ತಯಾರು ಮಾಡಿ, ಆ ಬಗ್ಗೆ ವರದಿಯೊಂದನ್ನು 2010ರಲ್ಲಿ ಅವರು ಸರ್ಕಾರಕ್ಕೆ ಕೊಟ್ಟಿರುವುದು ಬಹುಶಃ ಎಲ್ಲರ ಗಮನಕ್ಕೆ ಬಂದಿದೆ. ಹೀಗಾಗಿ ಈ ರೀತಿ ಕೊಟ್ಟಂಥ ಸಂದರ್ಭದಲ್ಲಿ ಅದನ್ನು ನಾವು ಗಂಭೀರವಾಗಿ ತೆಗೆದುಕೊಂಡು, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಜವಾಬ್ದಾರಿ ಇರಬಹುದು, ನಾವಾದರು ಒಂದು ಅಭಿಪ್ರಾಯದ ಹಿನ್ನೆಲೆಯ ನ್ನಿಟ್ಟುಕೊಂಡು ವೈಜ್ಞಾನಿಕ ರಂಗಕ್ಕೆ ಹೆಚ್ಚಿನ ರೀತಿಯಲ್ಲಿ ಅನುದಾನ ಕೊಡುವು ದಾಗಬೇಕೆನ್ನುವುದು ನಮ್ಮ ಅಭಿಪ್ರಾಯ. ಅಂದಾಗ ಹೊಸ ಹೊಸ ಸಂಶೋ ಧನೆಗಳು ಇವತ್ತು ಬರುವುದಕ್ಕೆ ಸಾಧ್ಯವಾಗುತ್ತದೆ. ಇಡೀ ಜಗತ್ತಿನಲ್ಲಿ ಭಾರತಕ್ಕೆ ಅಗ್ರಗಣ್ಯವಾದ ಒಂದು ಸ್ಥಾನ ಸಿಗುತ್ತಿದೆ. ಮಂಗಳಯಾನ ಈ ರೀತಿಯಾದ

ಒಂದು ಉಪಕ್ರಮಗಳಿಂದ ಇವತ್ತೇನು ಜಗತ್ತಿನ super powers ಇದ್ದಾವೆ, ಆ super powers ಬಿಟ್ಟು ಭಾರತ ಇವತ್ತು ಒಂದು ಹೆಜ್ಜೆ ಮುಂದಿಡುತ್ತಿದೆ ಇಂಥ ಸಂದರ್ಭದಲ್ಲಿ ವಿಜ್ಞಾನಕ್ಕೆ ಹೆಚ್ಚು ಮಹತ್ವ ಕೊಡುವುದರ ಮೂಲಕ, ಹೆಚ್ಚು ಅನುದಾನ ಕೊಡುವುದರ ಮೂಲಕ, ಯುವಕರು ಅದರಲ್ಲಿ ಹೆಚ್ಚು ಆಸಕ್ತಿ ವಹಿಸುವಂಥ ರೀತಿಯಲ್ಲಿ, ನಾವು ಆಸಕ್ತಿ ತೆಗೆದುಕೊಂಡಾಗ ಇನ್ನು ಹೆಚ್ಚು ಮಹತ್ವ ಬರುವುದಕ್ಕೆ ಸಾಧ್ಯವಿದೆ. ಸಿ.ಎನ್.ಆರ್. ರಾವ್ ಅಂಥವರು ಇನ್ನೂ ಹೆಚ್ಚು ವಿಜ್ಞಾನಿಗಳು ಬೆಳೆಯುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭ ದಲ್ಲಿ ಹೇಳುತ್ತಿದ್ದೇನೆ. ಅದಕ್ಕಾಗಿ ಇವತ್ತೇನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಇವತು ಕೇಂದ್ರ ಸರ್ಕಾರ ಅವರ ಅಭಿಪ್ರಾಯಕ್ಕೆ ಹೆಚ್ಚಿನ ಮನ್ನಣೆ ಕೊಡಬೇಕು ಎನ್ನುವ ನನ್ನ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ

ಇವರ ಜೊತೆಗೆ ಸಚಿನ್ ತೆಂಡೂಲ್ಕರ್ ಅವರ ಬಗ್ಗೆ ಈಗಾಗಲೇ ಮಾತನಾಡಿದವರೆಲ್ಲರೂ ಹೇಳಿದ್ದಾರೆ. ಸಚಿನ್ ತಂಡೂಲ್ಕರ್ ಬಗ್ಗೆ ಇಡೀ ಭಾರತ ದೇಶ, ಅದರಲ್ಲೂ ಇಡೀ ಜಗತ್ತು ಅವರನ್ನು ಕೊಂಡಾಡುತ್ತಿದೆ ಅವರು ಮಾಡಿದಂಥ ಸಾಧನೆ ಬಹುಶಃ ಅದು ಮೇರುಪರ್ವತದಂಥ ಸಾಧನೆ. ಬಹುಶಃ ನಮ್ಮ ಭಾರತ ಕ್ರಿಕೆಟ್ ಇತಿಹಾಸದಲ್ಲಿ ಇಷ್ಟು ದೊಡ್ಡ ಸಾಧನೆ ಮಾಡಿದಂಥ ವ್ಯಕ್ತಿ ಮತ್ತೊಬ್ಬರಿಲ್ಲ ಅವರನ್ನು ಕ್ರಿಕೆಟ್ ದೇವರು ಎಂದು ಕರೆಯುತ್ತಾರೆ. ನಾವು ಕೆಲವೊಬ್ಬ ರಿಲಿಜಿಯಸ್ ಲೀಡರ್ಸ್ ಅನ್ನು ನಡೆದಾಡುವ ದೇವರೆಂದು ಕರೆಯುತ್ತೇವೆ. ಹಾಗೆ ಈ ಸಚಿನ್ ತೆಂಡೂಲ್ಕರ್ ಅವರನ್ನು ನೆಡದಾಡುವ ದೇವರೆಂದು ಕರೆಯುತ್ತೇವೆ. ಅವರು ಎಷ್ಟು part and parcel ಆಗಿ ಕ್ರಿಕೆಟ್ ರಂಗಕ್ಕೆ ಆಗಿದ್ದಾರೆ, ಎಂದರೆ ಅವರು ಕ್ರಿಕೆಟ್ ರಂಗದಿಂದ ನಿವೃತ್ತಿಯಾಗುತ್ತಾರೆನ್ನುವ ಸುದ್ದಿಯನ್ನು ಕೇಳಿ ಸಾಕಷ್ಟು ಮಂದಿಗೆ ಆಘಾತವಾಗಿತ್ತು. ಕೆಲವರು ಯಾವಾಗ ನಿವೃತ್ತಿಯಾಗುತ್ತಾರೆಂದರೆ, ಅವರ ಶಕ್ತಿ ಇಲ್ಲದಿರುವಾಗ, ಅವರ ಸಾಮರ್ಥ್ಯ ಮುಗಿಯಿತು, ಇನ್ನೇನು ಮಾಡುವುದಕ್ಕಾಗುವುದಿಲ್ಲವೆನ್ನುವ ಸಂದರ್ಭದಲ್ಲಿ ನಿವೃತ್ತಿಯಾಗುವ ಜನರು ಬಹಳವಿರುತ್ತಾರೆ. ಆದರೆ ಸಚಿನ್ ತೆಂಡೂಲ್ಕರ್ ಆಡವಾಡುವುದಕ್ಕೆ

ಸಾಮರ್ಥ್ಯವಿದ್ದಾಗಲೂ ಸಹಿತ ಯುವಕರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆನ್ನುವ ದೃಷ್ಟಿಯಿಂದ ಅವರು ನಿವೃತ್ತಿಯನ್ನು ಘೋಷಣೆ ಮಾಡಿದರು.ಹೀಗಾಗಿ ಅವರ ಸಾಧನೆ ಬಹಳ ದೊಡ್ಡದು, ಇವತ್ತು ಅವರಿಗೆ ಭಾರತ ರತ್ನ ಪ್ರಶಸ್ತಿ ಸಿಕ್ಕಿದ್ದು ಅದೊಂದು ಗೌರವ ತರುವಂಥದ್ದು, ಒಬ್ಬ ಕ್ರಿಕೆಟ್ ಪ್ರೇಮಿಗೆ ಗೌರವ ಸಿಗುವಂಥದ್ದು. ಇದರ ಜೊತೆಗೆ ಇವತ್ತು ಕ್ರಿಕೆಟ್ ಆಟಕ್ಕೆ ಎಷ್ಟು ಮಹತ್ವ ಕೊಟ್ಟಿದ್ದೇವೆ, ಅಷ್ಟೇ ಮಹತ್ವವನ್ನು ಸ್ವದೇಶಿ ಆಟಗಳಿಗೂ ಸಹಿತ ಮಹತ್ವ ಸಿಗಬೇಕಾಗುತ್ತದೆ. ಕಬ್ಬಡಿ ಇರಬಹುದು, ಕುಸ್ತಿ ಇರಬಹುದು, ಕೊಕೋ ಇರಬಹುದು, ಹಾಕಿ ಇರಬಹುದು. ಈ ರೀತಿ ನಮ್ಮ ದೇಶಿಯ ಆಟಗಳಿಗೂ ಸಹಿತ ಮಹತ್ವ ಸಿಗಬೇಕು, ಆ ದಿಶೆಯಲ್ಲಿ ನಮ್ಮ ಗಮನ ಹರಿಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ಈ ಸಂದರ್ಭದಲ್ಲಿ ತಾವೇನು ಇವತ್ತು ಅಭಿನಂದನಾ ಪ್ರಸ್ತಾವವನ್ನು ತಂದಿದ್ದೀರಿ ಅದಕ್ಕೆ ನಾವೆಲ್ಲರೂ ಅಭಿನಂದನೆಯನ್ನು ಸಲ್ಲಿಸುತ್ತೇವೆ ಮತ್ತು ಇಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ನಿಮ್ಮೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಈ ಐತಿಹಾಸಿಕ ಸಮಾವೇಶದಲ್ಲಿ ಪ್ರಾರಂಭದಲ್ಲೇ ನಮ್ಮ ದೇಶಕ್ಕೆ ದೊಡ್ಡ ಗೌರವ ತಂದುಕೊಟ್ಟಂಥ, 21ನೇ ಶತಮಾನವೆಂದರೆ, ಭಾರತೀಯರ ಶತಮಾನವೆಂದು ಇಡೀ ಜಗತ್ತು ನಮ್ಮ ಕಡೆ ನೋಡುತ್ತಿದೆ ಇಂಥ ಸಂದರ್ಭದಲ್ಲಿ ಈ ವಿಜ್ಞಾನ ಕ್ಷೇತ್ರದಲ್ಲಿ ಬಹುಶಃ ಬಹಳ ಎತ್ತರಕ್ಕೆ ಬೆಳೆದಂಥ, ಸಾಮಾನ್ಯ ಮನುಷ್ಯ ನಾಗಿ ಹುಟ್ಟಿ ಬೆಳೆದು, ಸರಳ, ಸಜ್ಜನಿಕೆಯ ನಡವಳಿಕೆಯನ್ನು ಪ್ರತಿ ಕ್ಷಣ ನೋಡುತ್ತಿದ್ದೇವೆ. ಅಂಥ ಡಾ:ಸಿ.ಎನ್.ಆರ್.ರಾವ್ ಅವರಿಗೆ ಬಹುಶಃ ಪ್ರಪಂಚ ವಿಜ್ಞಾನ ಜಗತ್ತಿನಲ್ಲೇ ಮೆಚ್ಚುವಂಥ ಒಂದು ಭಾರತ ರತ್ನ ಪ್ರಶಸ್ತಿಯನ್ನು ಕೊಡುವುದರ ಮೂಲಕ ಭಾರತೀಯರು ನಮಗೆ ನಾವೇ ಗೌರವಿಸಿ ಕೊಂಡಂತಾಗಿದೆ. ಅದಕ್ಕೆ ಕೇಂದ್ರ ಸರ್ಕಾರಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಭಾರತ ಬಹಳ ಪವಿತ್ರವಾದ ದೇಶ, ಈ ಮಾತನ್ನು ಜರ್ಮನಿಯ ಬಹು ದೊಡ್ಡ ವಿಜ್ಞಾನಿ, ವಿದ್ವಾಂಸ ಮ್ಯಾಕ್ಸ್ ಮುಲ್ಲರ್ ಹೇಳುತ್ತಾನೆ, ಭಾರತದಲ್ಲಿ

ಸಂತರು, ಜ್ಞಾನಿಗಳು, ವಿಜ್ಞಾನಿಗಳು, ಸಾವಿರ ಸಾವಿರ ಸಂಖ್ಯೆಯಲ್ಲಿ ಆಗಿಹೋಗಿ ದ್ದಾರೆ, ನನಗೇನಾದರು ಪುನರ್ಜನ್ಮವೆನ್ನುವುದೇನಾದರು ಇದ್ದರೆ ನಾನು ಭಾರತದಲ್ಲಿ ಹುಟ್ಟಿ ಬರಲು ಬಯಸುತ್ತೇನೆ ಎನ್ನುವ ಮಾತನ್ನು ಹೇಳಿದರು ಬಹುಶ: ನಾವೆಲ್ಲರೂ ಪುಣ್ಯವಂತರು, ನಮ್ಮ ನಾಡಿನಲ್ಲಿ ಹುಟ್ಟಿಬೆಳೆದಂಥ ಈ ಮಹಾನ್ ವ್ಯಕ್ತಿ ನಮ್ಮ ಜೊತೆಯಲ್ಲಿದ್ದರೂ ನಮ್ಮ ಸರ್ಕಾರವಿದ್ದಂಥ ಸಂದರ್ಭ ದಲ್ಲಿ ಅವರನ್ನು ನಾನು ನೂರಾರು ಸಾರಿ ಭೇಟಿ ಮಾಡಿರಬಹುದು ನಮ್ಮ ಜೊತೆ, ನಮ್ಮ ಅಧಿಕಾರಿಗಳ ಜೊತೆ ನಡೆದುಕೊಂಡಂಥ ರೀತಿ, ಇಷ್ಟು ಎತ್ತರಕ್ಕೆ ಬೆಳೆದಂಥ ವ್ಯಕ್ತಿ ಎಂದು ನಮಗೆ ಯಾವುದೇ ಸಂದರ್ಭದಲ್ಲಿ ಅನಿಸಲೇ ಇಲ್ಲ. ಅಂಥ ಮಹಾನ್ ದೊಡ್ಡ ವಿಜ್ಞಾನಿ, ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ, ನಮ್ಮ ಕನ್ನಡ, ಕರ್ನಾಟಕದ ಮೂರನೇ ವ್ಯಕ್ತಿಗೆ ಇಂಥ ದೊಡ್ಡ ಪ್ರಶಸ್ತಿ ಸಿಕ್ಕಿದೆ. ಮುಖ್ಯಮಂತ್ರಿಗಳಿಗೆ ನಾನು ಇಷ್ಟನ್ನೇ ಹೇಳು ವುದಕ್ಕೆ ಇಷ್ಟಪಡುವುದು ಅವರು ವಿಜ್ಞಾನ ಕ್ಷೇತ್ರದಲ್ಲಿ ಬಹಳ ದೊಡ್ಡ ಸಾಧನೆ ಮಾಡಬೇಕೆಂದಿದ್ದಾರೆ, ಈ ಕ್ಷೇತ್ರಕ್ಕೆ ಅಗತ್ಯವಾದ ನೆರವಿಲ್ಲವೆನ್ನುವ ಕೊರಗನ್ನು ವ್ಯಕ್ತಪಡಿಸಿದ್ದಾರೆ. ಈ ಕನ್ನಡ ನಾಡಿನಲ್ಲೇ ಹುಟ್ಟಿ ಬೆಳೆದಂಥ ಒಬ್ಬ ವಿಜ್ಞಾನಿ ಯನ್ನು ತಾವು ಹೋಗಿ ಭೇಟಿಯಾಗಿ ಬಂದಿದ್ದೀರಿ, ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ. ನಮ್ಮ ರಾಜ್ಯದಲ್ಲಿ ಯುವಕರಲ್ಲಿ ವಿಜ್ಞಾನಿಗಳಿಗೆ ಕೊರತೆ ಇಲ್ಲ. ಅವರನ್ನು ಉಪಯೋಗ ಮಾಡಿಕೊಂಡು ಯಾವ ರೀತಿ ಈ ದೇಶಕ್ಕೆ ಬೇಕಾದ ವಿಜ್ಞಾನಿಯನ್ನು ಈ ಕ್ಷೇತ್ರದಲ್ಲಿ ಬಳಸಿಕೊಳ್ಳಬಹುದೆಂದು ಸಲಹೆಯನ್ನು ಕೊಡುತ್ತಾರೋ ಹಣಕಾಸಿನ ನೆರವನ್ನು ಕೇಳುತ್ತಾರೋ, ಅದಕ್ಕೆ ನೀವು ಒಂದು ದೊಡ್ಡ ಜವಾಬ್ದಾರಿಯನ್ನು ಕೊಟ್ಟು ಅವರನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ಅತ್ಯಂತ ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ ಏಕೆಂದರೆ, ಪ್ರಧಾನ ಮಂತ್ರಿಗಳು ಈ ಕ್ಷೇತ್ರಕ್ಕೆ ಅವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಂಡಿರುವ ಈ ಸಂದರ್ಭದಲ್ಲಿ, ನಾನು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಇನ್ನೂ ಅವರಿಗೆ ಪ್ರಶಸ್ತಿ ಸಿಗಬೇಕಾಗಿದೆ. ಈ ಮನೆಯ ಒಕ್ಕೊರಲಿನ ಒಪ್ಪಿಗೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ, ವಿಶೇಷವಾದ ಒಂದು ಅಧಿವೇಶನವನ್ನು ಮಾಡಿ, ಅಲ್ಲಿ

ಅವರನ್ನು ಕರೆದು ಸನ್ಮಾನ ಮಾಡುವ ಕೆಲಸವನ್ನು ನಿಮ್ಮ ಕಾಲದಲ್ಲಿ ಮಾಡಿದರೆ ಇಡೀ ಕನ್ನಡ ನಾಡಿನ ಆರೂವರೆ ಕೋಟಿ ಜನರಿಗೆ ಗೌರವ ಸಲ್ಲಿಸಿದಂತೆ, ಭಾರತೀಯ ಒಬ್ಬ ವಿಜ್ಞಾನಿಗೆ ಮೊದಲ ಬಾರಿ ಕರ್ನಾಟಕ ಸರ್ಕಾರ ಆ ರೀತಿ ಪ್ರಶಸ್ತಿ, ಗೌರವವನ್ನು ಕೊಟ್ಟು ಸನ್ಮಾನ ಮಾಡಿತು ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಬೇಕೆಂದು ನಾನು ವಿನಂತಿ ಮಾಡುತ್ತೇನೆ. ಬಹುಶಃ ಸಚಿನ್ ತೆಂಡೂಲ್ಕರ್, ಯುವಕರ ಆರಾಧ್ಯ ದೈವವೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಕ್ರಿಕೆಟ್ ಆಟವೆಂದರೆ ಬ್ರಿಟಿಷರ ಆಟವಾಗಿತ್ತು. ಅದನ್ನು ಭಾರತೀಯರ ಆಟವಾಗಿಸಿದರು. ಬಹುಶಃ ಅವರು ಒಂದೊಂದು ಮ್ಯಾಚ್‌ನಲ್ಲೂ ಆಟವಾಡುತ್ತಿದ್ದಂತಹ ಸಂದರ್ಭದಲ್ಲಿ, ಅವರು ಗಳಿಸಿದ ಕೀರ್ತಿ ಗೌರವ, ಸೆಂಚುರಿಗಳಿಗೆ ಬೆಲೆಯೇ ಇಲ್ಲ ಅನಾಯಸವಾಗಿ ಆ ಕ್ಷೇತ್ರದಲ್ಲಿ ಒಂದು ದೊಡ್ಡ ಸಾಧನೆ ಮಾಡಿದ ಒಬ್ಬ ಯುವಕ, ಬಹಳ ಚಿಕ್ಕ ವಯಸ್ಸಿನಲ್ಲೇ ಆಟವಾಡಬಹುದಾಗಿತ್ತು, ಆದರೂ ಸಹ ಅವರು ನಿವೃತ್ತಿಯಾದರು.ಒಂದು ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸಲೇ ಬೇಕು. ಯಾವತ್ತು ಅವರು ನಿವೃತ್ತಿಯನ್ನು ಹೊಂದಿದರೋ ಅವತ್ತೇ ಈ ಒಂದು ಭಾರತ ರತ್ನ ಪ್ರಶಸ್ತಿಯನ್ನು ಘೋಷಣೆ ಮಾಡಿದ್ದು, ನಿಜಕ್ಕೂ ಕೇಂದ್ರ ಸರ್ಕಾರ ಬಹಳ ಚಿಂತನೆಯನ್ನು ಮಾಡಿದೆ ಅದೇ ದಿವಸ ಈ ಭಾರತ ರತ್ನ ಪ್ರಶಸ್ತಿಯನ್ನು ಘೋಷಣೆ ಮಾಡಿದ್ದು ಇಡೀ ಪ್ರಪಂಚದ ಎಲ್ಲರ ಗೌರವಕ್ಕೆ ಕೇಂದ್ರ ಸರ್ಕಾರ ಪಾತ್ರವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಂತಹ ಕ್ರಿಕೆಟ್ ಆಟಗಾರನನ್ನು ಉಪಯೋಗ ಮಾಡಿಕೊಂಡು, ಈ ಕ್ರಿಕೆಟ್ ಕ್ಷೇತ್ರದಲ್ಲಿ ಅನೇಕ ಯುವಕರು ಬರುತ್ತಿದ್ದಾರೆ, ನಾವು ಕಲ್ಪನೆ ಮಾಡಿಕೊಳ್ಳಲಾಗದಷ್ಟು ಮಟ್ಟಿಗೆ ಸಚಿನ್ ತೆಂಡೂಲ್ಕರ್ ರೀತಿ ಬೆಳೆಯುವಂಥ ಯುವಕರು ಇದ್ದಾರೆ ಅವರೆಲ್ಲರನ್ನೂ ಉಪಯೋಗ ಮಾಡಿಕೊಂಡು ಕ್ರಿಕೆಟ್ ಕ್ಷೇತ್ರದಲ್ಲಿ ಬಹಳ ದೊಡ್ಡ ದೊಡ್ಡ ಆಟಗಾರರು ಇದ್ದಾರೆ, ಸಚಿನ್ ತೆಂಡೂಲ್ಕರ್ ರೀತಿ ತಯಾರು ಮಾಡುವುದಕ್ಕೂ ಸಹ, ಕ್ರಿಕೆಟ್ ಕ್ಷೇತ್ರಕ್ಕೆ, ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹಧನ ಕೊಡುವುದಕ್ಕೂ ಪ್ರೋತ್ಸಾಹ ಕೊಡುವುದಕ್ಕು ಸಹ ರಾಜ್ಯ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಈ ಒಂದು ವಿಶೇಷವಾದ

ಸಂದರ್ಭದಲ್ಲಿ ಭಾರತ ರತ್ನ ಪ್ರಶಸ್ತಿಯನ್ನು ಪಡೆದಂಥ ಡಾ: ಸಿ ಎನ್. ಆರ್ ರಾವ್ ಮತ್ತು ಸಚಿನ್ ತೆಂಡೂಲ್ಕರ್ ಅವರಿಗೆ ಈ ವಿಶೇಷವಾದ ಅಧಿವೇಶನದ ಪ್ರಾರಂಭದ ದಿವಸವೇ ಅವರ ಬಗ್ಗೆ ನಾಲ್ಕು ಒಳ್ಳೆಯ ಮಾತನ್ನಾಡಿ ಅವರಿಗೆ ಗೌರವ, ಅಭಿನಂದನೆಯನ್ನು ಸಲ್ಲಿಸುವಂಥ ಅವಕಾಶವನ್ನು ಮಾಡಿಕೊಂಡಂಥ ಅಧ್ಯಕ್ಷರಿಗೆ, ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಿ, ಇನ್ನೂ ದೊಡ್ಡ ವ್ಯಕ್ತಿಯಾಗಿ ಡಾ ಸಿ.ಎನ್.ಆರ್.ರಾವ್ ಅವರು ಬೆಳೆಯಲಿ, ಅವರ ಉದ್ಯೋಗವನ್ನು ಕರ್ನಾಟಕದ ಜನರಾದ ನಾವು ಉಪಯೋಗ ಮಾಡಿಕೊಂಡು, ಅವರು ಹೇಳುವಂಥ ಎಲ್ಲಾ ಸಲಹೆಗಳಿಗೆ ಸಹಕಾರ, ಸವಲತ್ತುಗಳನ್ನು ಕೊಡುವುದರ ಮೂಲಕ, ನಮ್ಮ ವಿಜ್ಞಾನ ಕ್ಷೇತ್ರದಲ್ಲಿ ಬೆಳೆಯುವಂಥ ಯುವಕರಿಗೆ ಸಹಕಾರಿಯಾಗುವಂಥ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಉಪಾಧ್ಯಕ್ಷರು: ಮಾನ್ಯ ಅಧ್ಯಕ್ಷರೆ, ಭಾರತದ ಪ್ರತಿಷ್ಠಿತ ಭಾರತ ರತ್ನ ಪ್ರಶಸಿಯನ್ನು ಪ್ರೊ.ಸಿ.ಎನ್.ಆರ್.ರಾವ್‌ರವರಿಗೆ ಹಾಗೂ ಶ್ರೀ ಸಚಿನ್ ತೆಂಡೂಲ್ಕರ್‌ರವರಿಗೆ ಕೊಟ್ಟಿರತಕ್ಕಂಥದ್ದು ನಿಜವಾಗಿಯೂ ಕೂಡ ಅಭಿನಂದನಾರ್ಹ ಎಂದು ಹೇಳಿ, ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ, 1954 ರಲ್ಲಿ ಪ್ರಾರಂಭವಾದ ಭಾರತ ರತ್ನ ಪ್ರಶಸ್ತಿ ಕೊಡುವುದು, ಇಡೀ ದೇಶದಲ್ಲಿ ಅನೇಕ ಪ್ರತಿಭಾನ್ವಿತ ವ್ಯಕ್ತಿಗಳಲ್ಲಿ ಸುಮಾರು 43 ವ್ಯಕ್ತಿಗಳಿಗೆ ಪ್ರಶಸ್ತಿ ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು. ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಮೂರು ವ್ಯಕ್ತಿಗಳಿಗೆ ಸರ್.ಎಂ.ವಿಶ್ವೇಶ್ವರಯ್ಯನವರು, ಪಂಡಿತ್ ಭೀಮಸೇನ್ ಜೋಷಿಯವರು ಮತ್ತು ಈಗ ಶ್ರೀ ಸಿ.ಎನ್.ಆರ್.ರಾವ್ ಹಾಗೂ ತೆಂಡೂಲ್ಕರ್‌ರವರಿಗೆ ಕೊಟ್ಟಿರುವುದು ಕೂಡ ಇಡೀ ನಮ್ಮ ರಾಜ್ಯಕ್ಕೆ ಗೌರವ ಕೊಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರಿನಲ್ಲಿರುವಂತಹ ಜವಾಹರ್‌ಲಾಲ್ ನೆಹರು ವಿಜ್ಞಾನ ಸಂಸ್ಥೆಯಲ್ಲಿ ಅದರ ಮುಖ್ಯಸ್ಥರಾಗಿ ಇವರು ಕೆಲಸ ಮಾಡುತ್ತಿದ್ದಾರೆ. ನಮಗೆ ವಿಶೇಷವಾಗಿ ಚಿಕ್ಕಬಳ್ಳಾಪುರ ಜಿಲ್ಲೆಗೆ ನಿಜವಾಗಿ ಕೂಡ ಒಂದು ರೀತಿ ಹೆಮ್ಮೆ ಎಂದು ಅನ್ನಿಸು

ತ್ತದೆ ಮಾನ್ಯ ಕುಮಾರಸ್ವಾಮಿಯವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಮೂರು ಭಾರತ ರತ್ನ ಪ್ರಶಸ್ತಿಗಳಲ್ಲಿ ಎರಡು ಪ್ರಶಸ್ತಿಗಳು ನಮ್ಮ ಜಿಲ್ಲೆಗೆ ಬಂದಿರುವುದು ಹೆಮ್ಮೆ. ಅನೇಕ ಅಂತರ ರಾಷ್ಟ್ರೀಯ ವಿಜ್ಞಾನ ಸಂಸ್ಥೆಗಳಲ್ಲಿ ಸುಮಾರು 20ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ವಿಜ್ಞಾನ ಸಲಹೆಗಾರರಾಗಿ ನೇಮಿಸಿರುವುದು ಕೂಡ ಪ್ರಶಂಸನೀಯ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇತ್ತೀಚೆಗೆ ಚೈನಾ ದೇಶದವರೂ ಕೂಡ ಅವರನ್ನು ವಿಜ್ಞಾನ ಸಲಹಾ ಸಮಿತಿಯಲ್ಲಿ ಸದಸ್ಯರಾಗಿ ಮಾಡಿಕೊಂಡಿರುವುದನ್ನು ನಾನು ಬಹಳ ಗೌರವದಿಂದ ಹೇಳುತ್ತೇನೆ. ಈ Fundamental research ಗೆ ನಾವು ಹೆಚ್ಚು ಒತ್ತು ಕೊಡುತ್ತಿಲ್ಲವೆಂದು ಇವರು ಅನೇಕ ಸಂದರ್ಭಗಳಲ್ಲಿ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದರು ನಮ್ಮ Central budget ನಲ್ಲಿ ಕನಿಷ್ಟ 0.2% ಬಜೆಟ್ ಅಲೋಕೇಷನ್ ಆಗಬೇಕು. ಈಗ ಕೊಡುತ್ತಿರತಕ್ಕಂಥದ್ದು 0.2% ಎಂದು ಹೇಳಿದರು. ಯಾವುದೇ ದೇಶದ ಅಭಿವೃದ್ಧಿಗೆ Fundamental research ಎನ್ನುವುದು ಬಹಳ ಮುಖ್ಯ ಬಹುಶಃ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇದಕ್ಕೆ ಹೆಚ್ಚು ಒತ್ತನ್ನು ಕೊಟ್ಟಿದ್ದಕ್ಕೆ ಆ ದೇಶ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಾಗಿದೆ. ಇತ್ತೀಚೆಗೆ ಚೈನಾ ದೇಶದವರು ಗೆ ಹೆಚ್ಚು ಒತ್ತು ಕೊಡುತ್ತಿರುವುದನ್ನು ನಾವು ಗಮನಿಸಬೇಕಾಗುತ್ತದೆ. ಹೆಚ್ಚು Fundamental research ಹೆಚ್ಚು ಸಂಶೋಧನಾ ಕೇಂದ್ರಗಳು ವಿಜ್ಞಾನಕ್ಕೆ ಹೆಚ್ಚು ಒತ್ತು ಕೊಡುವ ಕೆಲಸ ಆಗಬೇಕು. ಖಾಸಗಿ ಸಂಸ್ಥೆಗಳಾದ Infosys ಮತ್ತು Wipro ಗಳಂತಹ ಸಂಸ್ಥೆಗಳು research ಗೆ ಹಣ ತೊಡಗಿಸಬೇಕೆಂಬ ಸಲಹೆ ಕೊಟ್ಟಿದ್ದಾರೆ. ನಾವು ನಮ್ಮ ಶಿಕ್ಷಣ ಪದ್ಧತಿಯನ್ನು ಗಮನಿಸಿದಾಗ PUC, Degree ಇರಬಹುದು, ಹೆಚ್ಚು ವಿದ್ಯಾರ್ಥಿಗಳು Commerce ಮತ್ತು Arts ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ವಿಜ್ಞಾನ ಕೋರ್ಸ್ ಅನ್ನು ಆಯ್ಕೆ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ಎಲ್ಲೋ ಒಂದು ಕಡೆ ವಿಜ್ಞಾನದ ವಿಷಯದ ಕಡೆ ಹೆಚ್ಚು ಗಮನ ಕೊಡುತ್ತಿಲ್ಲ, ಅದಕ್ಕೆ ಬೇಕಾದ Fundamental research ಗೆ ಪ್ರೋತ್ಸಾಹ ಕೊಡತಕ್ಕ ರೀತಿಯಲ್ಲಿ ಬೆಳವಣಿಗೆ ಆಗದೇ ಇರುವುದನ್ನು ನಾವು ಗಮನಿಸಬಹುದಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ವಿಜ್ಞಾನಕ್ಕೆ ಪ್ರೋತ್ಸಾಹ ಕೊಡುವಂತಹ ಹೆಚ್ಚು ಕಾರ್ಯಕ್ರಮಗಳನ್ನು

ರೂಪಿಸುವುದು ಆಗಬೇಕು. ನಮ್ಮ ಬೆಂಗಳೂರಿನಲ್ಲಿರುವ Indian Institute of Science ಇಡೀ ಪ್ರಪಂಚದಲ್ಲಿರುವ ಹಲವಾರು ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳಲ್ಲಿ ಒಂದು. ಶ್ರೀ ಸಿ.ವಿ.ರಾಮನ್‌ನವರಂತಹ ಅನೇಕ ಶ್ರೇಷ್ಠ ವ್ಯಕ್ತಿಗಳು ಈ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ. ಹಾಗಾಗಿ ಇಂತಹ ಒಂದು ಪ್ರತಿಷ್ಠಿತ ಭಾರತ ರತ್ನ ಪ್ರಶಸ್ತಿಯನ್ನು ಅವರಿಗೆ ನೀಡಿರುವುದು ನಿಜವಾಗಿಯೂ ಅಭಿನಂದನಾರ್ಹ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಚಿನ್ ತೆಂಡೂಲ್ಕರ್‌ರವರಿಗೆ ಕೊಟ್ಟಿರತಕ್ಕಂತಹ ಪ್ರಶಸ್ತಿ ಇಡೀ ಕ್ರಿಕೆಟ್ ಜಗತ್ತಿಗೆ ಕೊಟ್ಟಿರತಕ್ಕ ಪ್ರಶಸ್ತಿ ಎಂದು ಅತ್ಯಂತ ಗೌರವದಿಂದ ನಾನು ಹೇಳುವುದಕ್ಕೆ ಬಯಸುತ್ತೇನೆ. ಅವರು ಕ್ರೀಡಾ ಜಗತ್ತಿನ heart throb ಅವರ ಆಕರ್ಷಣೀಯ ಆಟದ ಶೈಲಿ ಇಡೀ ದೇಶದ ಎಲ್ಲಾ ಜನರ ಮೆಚ್ಚುಗೆಗೆ ಪಾತ್ರ ಆಗಿದೆ. ಸಚಿನ್ ತೆಂಡೂಲ್ಕರ್‌ರವರ ಖಾಸಗಿ ಜೀವನ, ಬಹಳ ಸರಳ ಜೀವನ ಸಜ್ಜನಿಕೆ, ಮಧ್ಯಮ ವರ್ಗದಲ್ಲಿ ಹುಟ್ಟಿದಂತಹ ಆಟಗಾರರ ಆ ನಡತೆ ಅನುಕರಣೀಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಎರಡು ದೊಡ್ಡ ದಿಗ್ಗಜರಿಗೆ ಸರ್ಕಾರ ಅವರ ಸೇವೆಯನ್ನು ಗಣನೆಗೆ ತೆಗೆದುಕೊಂಡು ಈ ಪ್ರಶಸ್ತಿಯನ್ನು ಕೊಟ್ಟಿರತಕ್ಕಂಥದ್ದು ಒಳ್ಳೆಯದು ಎಂದು ಭಾವಿಸಿ ತಾವು ಏನು ಅಭಿನಂದನಾ ಪ್ರಸ್ತಾವ ಮಂಡಿಸಿದ್ದೀರಿ ಅದಕ್ಕೆ ನಾನೂ ಕೂಡ ಧ್ವನಿಗೂಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಬಿ. ಶ್ರೀರಾಮುಲು (ಬಳ್ಳಾರಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ.ಎನ್.ಆರ್.ರಾವ್‌ರವರು, ಸಚಿನ್ ತೆಂಡೂಲ್ಕರ್‌ರವರು ಭಾರತ ರತ್ನ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸುವುದಕ್ಕೆ ಏನು ಪ್ರಸ್ತಾವನೆಯನ್ನು ಮಂಡಿಸಿದ್ದೀರಿ, ಈ ದಿನ ರಾಸಾಯನಿಕ ಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆ ಇಂದಿನ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಬೇಕು ಮಾನ್ಯ ಸಿ.ಎನ್.ಆರ್.ರಾವ್‌ರವರು ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿದ ವ್ಯಕ್ತಿ ಆಗಿ ಭಾರತದ ಅತ್ಯುತ್ತಮ ಪ್ರತಿಷ್ಠಿತ ಪ್ರಶಸ್ತಿ ಪಡೆದಿರುವುದು ಬಹಳ ಹೆಮ್ಮೆಯ ಸಂಗತಿ. ಅದೇ ರೀತಿಯಲ್ಲಿ ಇಡೀ ಭಾರತ ದೇಶದಲ್ಲಿ 43 ಜನರಲ್ಲಿ ಮೂರು ಜನ ಕನ್ನಡಿಗರಾಗಿದ್ದಾರೆ. ಅದೇ ರೀತಿ ಡಾ: ಸರ್.ಎಂ.ವಿಶ್ವೇಶ್ವರಯ್ಯ, ಭೀಮ್ ಸೇನ್ ಜೋಷಿ, ಸಿ ವಿ ರಾಮನ್, ಡಾ: ಜಹಾಂಗೀರ್ ಬಾಬಾ, ಭಟ್ನಾಕರ್,

ಸತೀಶ್ ಧವನ್, ಅಬ್ದುಲ್ ಕಲಾಂ, ಸಿ.ಎನ್.ಆರ್. ರಾವ್ ರಾಸಾಯನಿಕ ಕ್ಷೇತ್ರಕ್ಕೆ ಸರ್ಕಾರದಿಂದ, ಕೊಡತಕ್ಕಂತಹ ಅನುದಾನ ಇವತ್ತು ಸಾಲುತ್ತಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಮೇರಿಕಾ, ಯೂರೋಪ್, ರಷ್ಯಾ ದೇಶ ಗಳಂತೆ ಮುಂದಿನ ದಿವಸಗಳಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ನಂಬರ್ ಒನ್ ಸ್ಥಾನದಲ್ಲಿ ಬರಬೇಕಾದರೆ ಸರ್ಕಾರದ ಜೊತೆಯಲ್ಲಿ ಸಾರ್ವಜನಿಕರು ಹಾಗೂ ಉದ್ಯಮಿ ಗಳ ಸಹಕಾರ ಅಗತ್ಯವಾಗಿದೆ. ಇವರುಗಳಿಗೆ ಭಾರತ ರತ್ನ ಪ್ರಶಸ್ತಿ ಸಿಕ್ಕಿರುವುದ ಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಕ್ರಿಕೆಟ್ ರಂಗದಲ್ಲಿ ಇಡೀ ಭಾರತ ದೇಶದಲ್ಲಿ ಹಾಗೂ ಜಗತ್ತಿನಲ್ಲಿ ಕ್ರಿಕೆಟ್ ಅಂದ ತಕ್ಷಣ ಕ್ರಿಕಟ್ ದೇವರು ಸಚಿನ್ ತೆಂಡೂಲ್ಕರ್ ಎಂಬ ಭಾವನೆ ಇದೆ. ಸಣ್ಣ ವಯಸ್ಸಿನಲ್ಲಿ 1989ರಲ್ಲಿ 16ನೇ ವರ್ಷದಲ್ಲಿ ಭಾರತ ಕ್ರೀಡಾ ತಂಡಕ್ಕೆ ಪ್ರವೇಶ ಮಾಡಿ ಕ್ರೀಡಾ ಲೋಕದಲ್ಲಿ ಸಾಕಷ್ಟು ಸಾಧನೆ ಮಾಡಿದರು ಟೆಸ್ಟ್ ಕ್ರಿಕೆಟ್ ಮತ್ತು one day cricket match ಗಳಲ್ಲಿ century ಬಾರಿಸುವ ಮೂಲಕ ಕ್ರಿಕೆಟ್ ರಂಗದಲ್ಲಿ ಸಚಿನ್ ತೆಂಡೂಲ್ಕರ್ ಬಂದರೆ ಸಾಕು ಗೆಲುವು ತರುತ್ತಾರೆ ಎನ್ನುವ ವಿಶ್ವಾಸವನ್ನು ಕರ್ನಾಟಕ ರಾಜ್ಯ ಹಾಗೂ ಇಡೀ ದೇಶದಲ್ಲಿ ನಂಬಿಕೆ ಮೂಡುವ ಹಾಗೆ ಮಾಡಿದ್ದಾರೆ. 24 ವರ್ಷಗಳಿಂದ ಸಾಕಷ್ಟು ಸಾಧನೆ ಮಾಡಿ ನಿವೃತ್ತಿ ಘೋಷಿಸಿರುವ ಇವರಿಗೆ ಭಾರತ ರತ್ನ ಪ್ರಶಸ್ತಿ ಸಿಕ್ಕಿರುವುದು ನಮಗೆಲ್ಲ ಸಂಗತಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಅಭಿನಂದನಾ ಪ್ರಸ್ತಾವವನ್ನು ಮಂಡನೆ ಮಾಡಿದ್ದೀರಿ ಅದರ ಪರವಾಗಿ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲಾ ನಾಯಕರುಗಳೂ ಕೂಡ ಸಂಭ್ರಮದಿಂದ ಸಂತೋಷ ವ್ಯಕ್ತಪಡಿಸಿದ್ದಾರೆ ಇವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅವರು ಅಭಿನಂದನೆಯನ್ನು ಮಾಡುವಂಥ ಸಂದರ್ಭದಲ್ಲಿ ಕೊಟ್ಟಂಥ ಅನೇಕ ಸಲಹೆ ಗಳನ್ನು ಸರ್ಕಾರ ಪರಿಗಣಿಸಲೇಬೇಕಾಗುತ್ತದೆ. ಡಾ: ಸಿ.ಎನ್. ಆರ್. ರಾವ್

ರವರು ನಮ್ಮವರು, ನಮ್ಮ ರಾಜ್ಯದವರು. ಅವರಿಗೆ ಭಾರತದ ಅತ್ಯುನ್ನತ ವಾದಂಥ ಭಾರತ ರತ್ನ ಪ್ರಶಸ್ತಿ ಬಂದಿರತಕ್ಕಂಥ ಹಿನ್ನಲೆಯಲ್ಲಿ, ಆ ಪ್ರಶಸ್ತಿ ಬಂದಾಗ ಅವರು ಬೆಂಗಳೂರಿಗೆ ಬಂದಂಥ ಸಂದರ್ಭದಲ್ಲಿ ಅವರು ಒಂದು ನೋವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರಗಳಿಂದ ಈ ಸಂಶೋಧನೆಗಳಿಗೆ ಹೆಚ್ಚು ಒತ್ತು ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದರ ಜೊತೆಯಲ್ಲಿ ಭಾರತದಲ್ಲಿ ಆಗತಕ್ಕಂಥ ಸಂಶೋಧನೆಗಳನ್ನು ಕೈಗಾರಿಕೆಗಳು ಕೂಡ ಬಳಸಿಕೊಳ್ಳತಕ್ಕಂಥ ರೀತಿಯಲ್ಲಿ ಆಗಬೇಕು ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಬಹುಶಃ ಅವೆರಡು ಮಾತುಗಳ ಹಿನ್ನಲೆಯನ್ನು ಕೇಂದ್ರ ಸರ್ಕಾರ ವಾಗಲಿ, ರಾಜ್ಯ ಸರ್ಕಾರವಾಗಲಿ, ಯಾವುದೇ ಸರ್ಕಾರವಾಗಲಿ ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವ ದೇಶ, ಯಾವ ರಾಜ್ಯ ಸಂಶೋಧನೆಗಳಿಗೆ ಹೆಚ್ಚು ಒತ್ತನ್ನು ಕೊಡುತ್ತದೋ ಅವರು ಮಾತ್ರ ಪ್ರಗತಿ ಹೊಂದಲು ಸಾಧ್ಯ. ಭಾರತೀಯರ ಶತಮಾನ 21ನೇ ಶತಮಾನವೆಂದು ಹೇಳಲಾಗುತ್ತಿದೆ. ಆ ಹೆಗ್ಗಳಿಕೆಗೆ ಪಾತ್ರರಾಗಬೇಕೆಂದರೆ ಅದು ವಿಜ್ಞಾನದಿಂದ ಮಾತ್ರ ಎನ್ನತಕ್ಕಂಥದ್ದನ್ನು ಇಡೀ ವಿಶ್ವ ಅರ್ಥ ಮಾಡಿಕೊಂಡಿದೆ. ಹೀಗಾಗಿಯೇ 21ನೇ ಶತಮಾನ ಭಾರತೀಯರ ಶತಮಾನವೆಂದು ಇಡೀ ವಿಶ್ವದಲ್ಲಿ ಕರೆಯುವುದಕ್ಕೆ ವಿಜ್ಞಾನವೇ ಮೂಲ ಕಾರಣವಾಗಿದೆ ಇಲ್ಲಿರತಕ್ಕಂಥ ಯುವಕರು, ಯುವ ಪಡೆ, ನಮ್ಮ ಶಿಕ್ಷಣ, ಶಿಕ್ಷಣ ವ್ಯವಸ್ಥೆಗಳಿಗೆ ನಾವು ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ, ಸಂಶೋಧನೆಗಳಿಗೆ ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ತಮಗೆಲ್ಲರಿಗೂ ಅರ್ಥವಾಗಿರ ತಕ್ಕಂಥದ್ದು, ಇಂದು ಸಂಶೋಧನೆಗೆ ಹೆಚ್ಚು ಒತ್ತನ್ನು ಕೊಡುತ್ತಿಲ್ಲ. ಸಂಶೋಧ ನೆಗೆ ಹೆಚ್ಚು ಒತ್ತು ಕೊಡುತ್ತಿಲ್ಲದ ಕಾರಣ ವಿಜ್ಞಾನಿಗಳಾದವರು ಬೇರೆ ದೇಶಗಳಿಗೆ ಹೋಗುತ್ತಿದ್ದಾರೆ. ಅಮೇರಿಕದಂಥ ದೇಶಗಳಿಗೆ ಹೋಗುತ್ತಿದ್ದಾರೆ. ಅದನ್ನು ತಪ್ಪಿಸುವಂಥ ಕೆಲಸವನ್ನು ಮಾಡಿದರೆ ಮಾತ್ರ ನಮ್ಮ ಭಾರತ 21ನೇ ಶತಮಾನದಲ್ಲಿ ಅಭಿವೃದ್ಧಿಯತ್ತ ಕಾಲಿಡುವುದಕ್ಕೆ ಸಾಧ್ಯ ಎನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ ಇವತ್ತು ಕರ್ನಾಟಕದ ನಾಲ್ಕು ಜನರಿಗೆ ಭಾರತ ರತ್ನ ಪ್ರಶಸ್ತಿಗಳು ಬಂದಿವೆ. ಮೊದಲನೆಯದಾಗಿ ಸರ್.ಎಂ.ವಿಶ್ವೇಶ್ವರಯ್ಯನವರು

ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅವರೊಬ್ಬ ದೊಡ್ಡ ವಿಜ್ಞಾನಿಯೇ ಆಗಿದ್ದರು ಅವರೂ ಕೂಡ ಈ ಕ್ಷೇತ್ರದಲ್ಲಿ ದೊಡ್ಡ ಸಂಶೋಧಕರೆ. ಇನ್ನೊಬ್ಬರು ಭೀಮ ಸೇನ್ ಜೋಷಿಯವರು, ಸರ್ ಸಿ ವಿ ರಾಮನ್‌ರವರು ಮತ್ತು ಈಗ ಸಿ.ಎನ್. ಆರ್ ರಾವ್‌ರವರು ಒಟ್ಟು 43 ಭಾರತ ರತ್ನ ಪ್ರಶಸ್ತಿ ಕೊಟ್ಟಿರುವುದರಲ್ಲಿ 4 ಪ್ರಶಸ್ತಿಗಳು ಕರ್ನಾಟಕದ ಪಾಲಾಗಿದೆ. ಅದರಲ್ಲಿ ಮೂರು ವಿಜ್ಞಾನಿಗಳಿಗೆ ಸಂಶೋಧನೆಗಾಗಿ ಕೊಟ್ಟಿರತಕ್ಕಂಥದ್ದು. ಸನ್ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿ, ಒಂದು ದೊಡ್ಡ ಕಾರ್ಯಕ್ರಮವನ್ನು ಮಾಡಿ ಎನ್ನ ತಕ್ಕಂಥ ಸಲಹೆಯನ್ನು ಕೊಟ್ಟರು. ಅದನ್ನು ನಿಜವಾಗಿಯೂ ಒಪ್ಪಿಕೊಳ್ಳ ಬೇಕಾಗುತ್ತದೆ. ಈ ಮುಖೇನ ಈ ಮೂರು ಜನ ದಿಗ್ಗಜರು ಅವರು ಭಾರತ ಪ್ರಶಸ್ತಿಯನ್ನು ಪಡೆದುಕೊಂಡಿರುವುದರಿಂದ ಕರ್ನಾಟಕದಲ್ಲಿ ವಿಜ್ಞಾನಿಗಳಿಗೆ ಹೆಚ್ಚು scope ಇದೆ ಎನ್ನುತಕ್ಕಂಥ ರೀತಿಯಲ್ಲಿ ಆ ಬಗ್ಗೆ ಇಡೀ ದೇಶಕ್ಕೆ ಮತ್ತು ವಿಶ್ವಕ್ಕೆ ಅಂತರರಾಷ್ಟ್ರೀಯ ಮಟ್ಟಕ್ಕೆ ತೋರಿಸುವಂಥ ಅನಿವಾರ್ಯತೆ ಇದೆ ಎನ್ನತಕ್ಕಂಥ ಮಾತನ್ನು ಒಪ್ಪಬೇಕಾಗುತ್ತದೆ. ಇನ್ನು ಸಚಿನ್ ತೆಂಡೂಲ್ಕರ್‌ರವರ ಬಗ್ಗೆ ಹೇಳಬೇಕೆಂದರೆ, ಅವರೊಬ್ಬ ಕ್ರಿಕೆಟ್ ಪಟು, ಆಟಗಾರ, ಅವರ ಹೆಸರು ಯಾವ ಎತ್ತರದ ಮಟ್ಟಕ್ಕೆ ಹೋಯಿತೆಂದರೆ, ಅವರು ಕ್ರಿಕೆಟ್‌ಗೆ ದೇವರಾಗಿ ಬಿಟ್ಟಿದ್ದಾರೆ ಕ್ರಿಕೆಟ್ ನಮ್ಮ ಆಟವಲ್ಲ, ಇಂಗ್ಲೀಷ್ ನಮ್ಮ ಭಾಷೆಯಲ್ಲ. ಆದರೂ ಕೂಡ ಇಂಗ್ಲಿಷ್ ಭಾಷೆಯಲ್ಲಿ ಅವರನ್ನು ಮೀರಿಸುವಂಥದ್ದರ ಜೊತೆಗೆ ಅವರಿಂದ ಕಲಿತಂಥ ಕ್ರಿಕೆಟ್‌ನಲ್ಲಿಯೂ ಕೂಡ ಮೀರಿಸುವ ನಿಟ್ಟಿನಲ್ಲಿ ಇವತ್ತು ಅವರನ್ನೂ ಕೂಡ ಕ್ರಿಕೆಟ್‌ನಲ್ಲಿ ಸೋಲಿಸಿ ವಿಶ್ವದಲ್ಲಿಯೇ ಮಾನ್ಯತೆಯನ್ನು ಪಡೆದು ವಿಶ್ವ ಚಾಂಪಿಯನ್ ಆದರು. ಅವರು ಕ್ಯಾಪ್ಟನ್ ಆಗಿದ್ದರು. ಸಾಮಾನ್ಯ ವಾಗಿ ಕ್ಯಾಪ್ಟನ್ ಆದವರಲ್ಲಿ ಎಲ್ಲರೂ ತದನಂತರದಲ್ಲಿ ನಿವೃತ್ತರಾಗಿಬಿಡುತ್ತಾರೆ. ಆದರೆ ಇವರು ನಿವೃತ್ತಿಯಾಗಲಿಲ್ಲ. ಕ್ರಿಕೆಟ್ ಪಟುವಾಗಿ, ಆಟಗಾರನಾಗಿ ಮುಂದುವರೆದರು. ಬಹುಶಃ ಅವರು ಮಾಡಿರತಕ್ಕಂಥ ಸಾಧನೆಯನ್ನು ಇವತ್ತು ಇಂಗ್ಲೆಂಡ್‌ನಲ್ಲಿಯೂ ಕೂಡ ಯಾರೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅಂಥ ಸಾಧನೆಯನ್ನು ತೆಂಡೂಲ್ಕರ್‌ರವರು ಮಾಡಿದ್ದಾರೆ. ಇವರನ್ನು ಸೇರಿಸಿದಂತೆ ಇಂದು ಇಬ್ಬರು ಮಹನೀಯರಿಗೆ ಅತ್ಯುನ್ನತವಾದಂಥ ಭಾರತ ರತ್ನ ಪ್ರಶಸ್ತಿ

ಯನ್ನು ಕೊಟ್ಟಿರುವುದರಿಂದ ನಾವು ಕೇಂದ್ರ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಈ ವಿಚಾರದಲ್ಲಿ ಧ್ವನಿಗೂಡಿಸಿದಂಥ ಎಲ್ಲ ಮಾನ್ಯ ಸದಸ್ಯರುಗಳಿಗೂ ಕೂಡ ವಂದನೆಯನ್ನು ಸಲ್ಲಿಸುತ್ತಾ, ತಾವು ತಂದಿರತಕ್ಕಂಥ ಅಭಿನಂದನಾ ಪ್ರಸ್ತಾವಕ್ಕೆ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ.ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):–ಮಾನ್ಯ ಅಧ್ಯಕ್ಷರೆ, ಸಿ.ಎನ್.ಆರ್.ರಾವ್ ಮತ್ತು ಸಚಿನ್ ತೆಂಡೂಲ್ಕರ್‌ರವರುಗಳು ಭಾರತದ ಸುಪುತ್ರರು. ಇವರುಗಳಿಗೆ ಭಾರತ ರತ್ನ ಪ್ರಶಸ್ತಿ ಕೊಟ್ಟಿರುವುದನ್ನು ಇಡೀ ಭಾರತದಲ್ಲಿ ಎಲ್ಲರೂ ಅಭಿನಂದಿಸಬೇಕಾಗುತ್ತದೆ. ಆದರೆ ಒಂದು ವಿಚಾರವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ವಿಜ್ಞಾನ, ತಂತ್ರಜ್ಞಾನಗಳು ಇಡೀ ದೇಶಕ್ಕೆ ಎಷ್ಟು ಪೂರಕವೋ ಅಷ್ಟೇ ಮಾರಕವಾಗುತ್ತಿದೆ. ರಾಸಾಯನಿಕ ಅಸ್ತ್ರಗಳನ್ನು ದುರುಪಯೋಗ ಮಾಡಬಾರದು. ಹಿಂದೆ ಐನ್‌ಸ್ಟೀನ್ ಹೇಳಿದ, ನಾನು ಆಟಂ ಬಾಂಬ್‌ಗಳನ್ನು ಕಂಡುಹಿಡಿದು ದೇಶಕ್ಕೆ ಏನೋ ಒಳ್ಳೆಯದು ಮಾಡಬೇಕೆಂದು ಮಾಡಿದ್ದೇನೆಂದ. ಆದರೆ ಆಟಂ ಬಾಂಬ್‌ನ್ನು ಹಿರೋಷಿಮಾ, ನಾಗಸಾಕಿಯ ಮೇಲೆ ಹಾಕಿ ಜಗತ್ತಿನಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಸರ್ವನಾಶವಾಗತಕ್ಕಂತ ಪರಿಸ್ಥಿತಿ ಬಂದಿತು. ಇವತ್ತು ಪಿಲಿಫೈನ್ಸ್‌ನಲ್ಲಿ ರಾಸಾಯನಿಕ ಅಸ್ತ್ರವನ್ನು ಉಪಯೋಗಿಸಿ 145 ಜನರ ಹತ್ಯೆಯಾಯಿತು. ಆದುದರಿಂದ ವಿಜ್ಞಾನದಲ್ಲಿ ಸಿ.ಎನ್.ಆರ್.ರಾವ್‌ರವರ ಜ್ಞಾನವೇನಿದೆ ಅದು ಜಗತ್ತಿನ ಅಭಿವೃದ್ಧಿಗೆ ಪೂರಕ ವಾಗುವುದರಲ್ಲಿ ಬೇರೆ ಮಾತಿಲ್ಲ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ದೇಶ ಮತ್ತು ಜಗತ್ತನ್ನು ಉಳಿಸುವ ದಿಕ್ಕಿನಲ್ಲಿ ಹೋದರೆ ಮಾತ್ರ ವಿಜ್ಞಾನಕ್ಕೆ ಗೌರವವೆಂದು ಹೇಳಬಯಸುತ್ತೇನೆ. ಇನ್ನು ಎರಡನೆಯದಾಗಿ ತೆಂಡೂಲ್ಕರ್ ಒಂದು ಬ್ಯಾಟ್ ಮತ್ತು ಒಂದು ಬಾಲ್‌ನ ಆಟಗಾರನಲ್ಲ. ಬ್ರಾಡ್‌ಮನ್ ಎನ್ನುವವರು ಕ್ರಿಕೆಟ್‌ನ ಭೀಷ್ಮ, ಈ ಆಟದಲ್ಲಿ ಜಗತ್ತಿನಲ್ಲಿಯೇ ಒಳ್ಳೆಯ ಹೆಸರನ್ನು ಮಾಡಿದವರು. ಅವರ ನಂತರ ಸೋಬರ್ಸ್, ಜಗತ್ತಿನ ಕರಿಯ ಜನಾಂಗದಲ್ಲಿ ಹುಟ್ಟಿ, ಆ ಕರಿಯ ಜನಾಂಗವನ್ನು ದ್ವೇಷ ಮಾಡುತ್ತಿದ್ದ ಸೌತ್ ಆಫ್ರಿಕಾದಲ್ಲಿ ಸುಮಾರು ವರ್ಷಗಳ ಕಾಲ ಕರಿಯ ಜನರಿಗೆ ಕ್ರಿಕೆಟ್ ಆಡುವುದಕ್ಕೆ

ಅವಕಾಶವಿರಲಿಲ್ಲ ಆಗ ಭಾರತ ಆ ದೇಶದ ಜೊತೆ ಆಟವಾಡುವುದಿಲ್ಲವೆಂದು ಹೇಳಿ ಆ ಬಗ್ಗೆ ಬಹಳ ದೊಡ್ಡ ವಿರೋಧವನ್ನು ಮಾಡಿದರು. ಸಚಿನ್ ತೆಂಡೂಲ್ಕರ್ ಕೇವಲ ಕ್ರಿಕೆಟ್ ಪಟುವಲ್ಲ. ಜಗತ್ತಿನ ಒಂದು ಸಾಂಸ್ಕೃತಿಕ ಆಂದೋಲನದಲ್ಲಿ ಕರಿಯರು, ಬಿಳಿಯರು ಎನ್ನತಕ್ಕಂತಹ ಭಾವನೆಯನ್ನು ನಾಶ ಮಾಡತಕ್ಕಂಥ ಕ್ರೀಡಾ ರಂಗದ ಧೃವತಾರೆ. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೆನೆಂದರೆ, ತೆಂಡೂಲ್ಕರ್‌ಗೆ ಅಭಿನಂದನೆಯನ್ನು ಸಲ್ಲಿಸುವುದೊಂದೇ ಅಲ್ಲ, ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕ್ರೀಡಾ ರಂಗಕ್ಕೆ ಹೆಚ್ಚು ಒತ್ತು ಕೊಡಬೇಕು. ಯುವಜನ ಮತ್ತು ಕ್ರೀಡಾ ಸಚಿವರು ಕೇವಲ 135 ಕೋಟಿ ರೂ.ಗಳನ್ನು ಮಾತ್ರ ಇಟ್ಟಿದ್ದಾರೆ. ತೆಂಡೂಲ್ಕರ್‌ಗೆ ನೀವು ಅಭಿನಂದನೆಯನ್ನು ಸಲ್ಲಿಸಿ ನಮ್ಮವರಲ್ಯಾರನ್ನೂ ಭಾರತ ರತ್ನ, ಕರ್ನಾಟಕ ರತ್ನ ಮಾಡದೆ ಸುಮ್ಮನೆ ಭಾರತ ರತ್ನವೆಂದು ಘೋಷಣೆ ಮಾಡಿದರೆ ಪ್ರಯೋಜನವಿಲ್ಲ. ನಿಜವಾಗಿಯೂ ಅಂಥ ರತ್ನಗಳನ್ನು ತಯಾರು ಮಾಡುವುದಕ್ಕಾಗಿ ಕ್ರೀಡಾ ಚಟುವಟಿಕೆಗಳಿಗೆ, ಕ್ರೀಡಾ ರಂಗಕ್ಕೆ ಹೆಚ್ಚು ಪ್ರೋತ್ಸಾಹ ಕೊಡಲು ಸರ್ಕಾರ ಆಲೋಚನೆಯನ್ನು ಮಾಡಬೇಕು. ಈಗ ಎಲ್ಲ ಗರಡಿಗಳೂ ಮುಚ್ಚಿಹೋಗುತ್ತಿವೆ. ಇಂದು ತೆಂಡೂಲ್ಕರ್‌ರವರನ್ನು ನೆನಪು ಮಾಡುವ ಮೂಲಕ ಇನ್ನೂ ಎರಡು ನೂರು ಕೋಟಿ ರೂ.ಗಳ ಹೆಚ್ಚಿನ ಅನುದಾನವನ್ನು ನೀಡಿ ಕರ್ನಾಟಕದಲ್ಲಿ ಗರಡಿಗಳನ್ನು ತೆರೆಯುವುದರ ಮೂಲಕ ಮತ್ತು ಕ್ರೀಡಾ ಪಟುಗಳಿಗೆ ಹೆಚ್ಚಿನ ಉತ್ತೇಜನವನ್ನು ಕೊಡುವುದರ ಮೂಲಕ ಕ್ರಮ ತೆಗೆದುಕೊಂಡು ತದನಂತರ ಇಲ್ಲಿ ಅಭಿನಂದನೆಯನ್ನು ಸಲ್ಲಿಸಿದರೆ ಮಾತ್ರ ಸಾರ್ಥಕವಾಗುತ್ತದೆ ತೆಂಡೂಲ್ಕರ್‌ಗೆ ಅಭಿನಂದನೆಯನ್ನು ಸಲ್ಲಿಸಿಬಿಟ್ಟು ಇಲ್ಲಿ ನಮ್ಮವರಿಗೆ ಏನೂ ಮಾಡದಿದ್ದರೆ ನಾವು ಬೇಜಾರು ಕಳೆಯುವುದಕ್ಕೆ ಅಭಿನಂದನೆಯನ್ನು ಸಲ್ಲಿಸಿದಂತಾಗುತ್ತದೆಂದು ಹೇಳಬೇಕಾಗುತ್ತದೆ. ಆದಕಾರಣ ಕರ್ನಾಟಕ ಸರ್ಕಾರ ಕ್ರೀಡಾ ರಂಗಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಹೇಳುತ್ತಾ ತಾವೇನು ಈಗಾಗಲೇ ಅಭಿನಂದನಾ ಪ್ರಸ್ತಾವವನ್ನು ಏನು ಮಂಡಿಸಿದ್ದೀರಿ ಇದಕ್ಕೆ ಸಂಪೂರ್ಣ ಸಹಮತವನ್ನು ಸಲ್ಲಿಸುತ್ತಾ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ

ಅಧ್ಯಕ್ಷರು:– ಈ ನಿರ್ಣಯವನ್ನು ಅಭಿನಂದಿತ ಗಣ್ಯರಿಗೆ ಕಳುಹಿಸಿಕೊಡಲಾಗುವುದು.

2.ಸಂತಾಪ ಸೂಚನೆ

ಸಭಾಧ್ಯಕ್ಷರು: ಈಗ ಸಂತಾಪ ಸೂಚನೆ

ರಾಜ್ಯದ ಮಾಜಿ ಸಚಿವರುಗಳಾಗಿದ್ದ ಹೆಚ್.ಶಿವಪ್ಪ, ಕೆ ಯಂಕಟಪ್ಪ ಮತ್ತು ಮಹಾದೇವಪ್ಪ ಶಿವಪ್ಪ ಕಟಗಿ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ.ಬಿ. ಪುಟ್ಟಕಾಮಯ್ಯ, ಆರ್.ಕೆ.ರಾಥೋಡ್, ಎಲ್.ಕೆ ಚವ್ಹಾಣ ಮತ್ತು ಖ್ಯಾತ ಹಿನ್ನೆಲೆ ಗಾಯಕ ಡಾ. ಮನ್ನಾ ಡೇ ಹಾಗೂ ಚಲನಚಿತ್ರ ನಿರ್ದೇಶಕ ಡಿ.ರಾಜೇಂದ್ರಬಾಬು ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ

1. ಹೆಚ್.ಶಿವಪ್ಪ

ಹೆಚ್.ಶಿವಪ್ಪ ಅವರು ದಿನಾಂಕ: 1ನೇ ಏಪ್ರಿಲ್, 1937ರಂದು ಹರಿಹರ ತಾಲ್ಲೂಕು ಬನ್ನಿಕೋಡ್ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ನ್ಯಾಯವಾದಿ ಮತ್ತು ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. 1974 ರಿಂದ 1980 ರವರೆಗೆ ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆಯ ಉಪಾಧ್ಯಕ್ಷರಾಗಿ ಮತ್ತು 1980 ರಿಂದ 2005ರವರೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು 1980ರಲ್ಲಿ ಹರಿಹರ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಚುನಾಯಿತರಾಗಿದ್ದರಲ್ಲದೆ 1994ರಲ್ಲಿ ಹತ್ತನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ದಿವಂಗತರು ದಿನಾಂಕ:14.06.1998 ರಿಂದ 01.03.1999 ರವರೆಗೆ ಭಾರಿ ಮತ್ತು ಮಧ್ಯಮ ಕೈಗಾರಿಕೆ ರಾಜ್ಯ ಸಚಿವರಾಗಿ ಮತ್ತು 02.03.1999 ರಿಂದ 10.10.1999 ರವರೆಗೆ ಸಕ್ಕರೆ ಖಾತೆಯ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.